

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT


Volume : 07 | Issue : 285 | Saturday 26-07-2025 | E-mail : maruti.b.hosamani76@gmail.com | Page: 4 | Price : Rs. 1/-


## ಜಿ.ಹರೀಶ್ ಹೆಚ್ಚುವರಿ ಎಸ್ಪಿ, ರಾಯಚೂರು ಎಸ್ಸಿ/ಎಸ್ಟಿ ಕಾಯ್ದೆಯಲ್ಲಿ ಆರೋಪಿ 2 ಆಗಿದ್ದು, ಪ್ರಕರಣದಲ್ಲಿ ತಿರುಚಿದ್ದರಿಂದ – ಕ.ದ.ರ.ವೇ ಯಿಂದ ತತಕ್ಷಣ ವರ್ಗಾವಣೆಗೆ ಆಗ್ರಹ

**ಸಿಹಿ ಕಹಿ ಸುದ್ದಿ,**


**ಬಳ್ಳಾರಿ :** ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿ ಬಳ್ಳಾರಿ ಈಗ ತಮ್ಮ ಗಮನಕ್ಕೆ ತಂದು ಮನವಿ ಮಾಡಿ ಕೊಳ್ಳುವುದು ಏನೆಂದರೆ ಹಾಗು ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಯಚೂರು ನಗರದ ಮಾರ್ಕೆಟ್ ಯಾರ್ಡ್ ಪೋಲಿಸ್ ಠಾಣೆಯಲ್ಲಿ ಡಾ, ಕವಿತ ಪಾಟೀಲ್ ಹಾಗೂ ಇತರರ ವಿರುದ್ಧ ಸೆಕ್ಷನ್ 167,177,182,34 ಐ.ಪಿ.ಸಿ ಹಾಗೂ 3.1.ಕ್ಯೂ, 3.1. ಜಡ್. ಎ. (ಇ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಗುನ್ನಾ ನಂಬರ್ 39/2017 ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಜಿ.ಹರೀಶ್ ಡಿ.ವೈ.ಎಸ್.ಪಿ ಅವರನ್ನು ತನಿಖಾಧಿಕಾರಿಯಾನ್ನಾಗಿ ನೇಮಿಸಲಾಗಿತ್ತು.

ಆದರೆ ಜಿ.ಹರೀಶ್ ಬಾಬು ಡಿವೈಎಸ್ಪಿ ತನಿಖಾಧಿಕಾರಿಗಳು ಸರಿಯಾದ ತನಿಖೆಯನ್ನು ಮಾಡಲಾರದೆ ತನಿಖೆಯಲ್ಲಿ ನಿಜ ಸ್ಥಿತಿಯ ವರದಿಯನ್ನು ಮಾಡಲಾರದೆ ಅದನ್ನು ಬಿಟ್ಟು ಆರೋಪಿಗಳ ಪರವಾಗಿ ತನಿಖೆಯನ್ನು ಬಿ.ಡಿ ಜೈನ್ ಸಹಾಯಕ ಕಾರ್ಯದರ್ಶಿ ಎಮ್ ಸಿ.ಐ ಇವರ ಜೊತೆ ಸಂಪೂರ್ಣವಾಗಿ ಶ್ಯಾಮೀಲಾಗಿದ್ದರಿಂದ ಬಾದಿತದಾರರಾದ ದಲಿತ ಸರ್ಕಾರಿ ನೌಕರಿಯಲ್ಲಿ ನಿಷ್ಠೆಯಿಂದ ಪ್ರಾಮಾಣಿಕವಾಗಿ ಸೇವೆಯನ್ನು ಸಲ್ಲಿಸುತ್ತಿದ್ದಂತ ಡಾ, ಬಿ.ರಮೇಶ್ ಬಾಬು ಇವರಿಗೆ ತೊಂದರೆ ಕೊಡಬೇಕು ಅನ್ನುವ ಮನಸ್ಥಿತಿ ಮಾಡಿ ಕೊಂಡಿದ್ದರಿಂದ ಡಿವೈಎಸ್ಪಿ ಜಿ.ಹರೀಶ್ ತನ್ನ ಹಣದ ಆಸೆಗೆ ಅಧಿಕಾರ ದುರ್ಬಳಕೆ ಮಾಡಿಕೊಂಡು ಮೋಸದಿಂದ ಹಾಗೂ ಉದ್ದೇಶಪೂರ್ವಕವಾಗಿ ಮಾಡಿ ಜಿ.ಹರೀಶ್



ಕರ್ನಾಟಕ ದಲಿತ ರಕ್ಷಣಾ ವೇದಿಕೆ (ರಿ)
ಜಿಲ್ಲಾ ಸಮಿತಿ, ಬಳ್ಳಾರಿ-ವಿಜಯನಗರ

ಡಿ.ವೈ.ಎಸ್ಪಿ ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ವ್ಯವಸ್ಥಿತವಾಗಿ ಸುಳ್ಳು ಸಾಕ್ಷಿ ಸೃಷ್ಟಿಸಿ ದಲಿತ ಡಾ, ಬಿ.ರಮೇಶ್ ಬಾಬು ವೈದ್ಯರಿಗೆ ತೊಂದರೆ ನೀಡಿದ್ದರಿಂದ ಡಾ, ಬಿ.ರಮೇಶ್ ಬಾಬು ಇವರು ಜಿಲ್ಲಾ ಪರಿಶಿಷ್ಟ ಜಾತಿಯ ದೌರ್ಜನ್ಯ ಸಮಿತಿಯ ಮೊರೆ ಹೋಗಿ ಹಾಗೂ ಸಾರ್ವಜನಿಕ ನ್ಯಾಯದ ಆಡಳಿತ ಅಪರಾಧಗಳನ್ನು (perjury and offences related to administration of public justice), ???2(2)ರಲ್ಲಿ National commission for Scheduled caste ಇವರು ಆದೇಶದನ್ವಯ ಜಿಲ್ಲಾಧಿಕಾರಿ ರಾಯಚೂರು ಹಾಗೂ ಇದಕ್ಕೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರು ಆಗಿರುತ್ತಾರೆ ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದೌರ್ಜನ್ಯ ಜಿಲ್ಲಾಧಿಕಾರಿಗಳು



ಕರ್ನಾಟಕ ದಲಿತ ರಕ್ಷಣಾ ವೇದಿಕೆ (ರಿ)
ಜಿಲ್ಲಾ ಸಮಿತಿ, ಬಳ್ಳಾರಿ-ವಿಜಯನಗರ

ಜಾಗೃತಿ ಉಸ್ತುವಾರಿ ಸಮಿತಿಯು ರಾಯಚೂರು ತನಿಖೆ ಕೈಗೊಂಡು ಸೆಕ್ಷನ್ 69 ಅಂಚೆ ಕಾಯ್ದೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ದೌರ್ಜನ್ಯ ಕಾಯ್ದೆಯ ಅಡಿಯಲ್ಲಿ ಐ.ಪಿ.ಸಿ ಕಾಯ್ದೆಗಳನ್ವಯ ವಿಶೇಷಸತ್ರನ್ಯಾಯಲಯರಾಯಚೂರಿನಲ್ಲಿ ಸದರಿ ಜಿ.ಹರೀಶ್ ಡಿವೈಎಸ್ಪಿ ಅಧಿಕಾರಿಗಳ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದ್ದು, ಸದರಿ ಪ್ರಕರಣ ನ್ಯಾಯಲಯದಲ್ಲಿ ಇನ್ನೂ ಬಾಕಿ ಇರುತ್ತದೆ. ಆದರು ಆರೋಪಿ–2 ಜಿ.ಹರೀಶ್ ಡಿವೈಎಸ್ಪಿ ಅವರು ಆಗಿದ್ದು ಈಗ ಮುಂಬಡ್ತಿ ಹೊಂದಿದ್ದು Additional SP ಯಾಗಿ ರಾಯಚೂರಿನಲ್ಲಿ ಈಗ ಕಾರ್ಯನಿರ್ವಹಿಸುತ್ತಿದು ಅವರು ಆವಾಗ ಡಿವೈಎಸ್ಪಿ ಅಧಿಕಾರಿ ಇದಾಗನೇ ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದು ಈಗ ಮತ್ತೆ ಇನ್ನೂ ಹೆಚ್ಚಿನ ಅಧಿಕಾರಈಗಆರೋಪಿ2ಜಿ.ಹರೀಶ್ಬಾಬು ಜಿಲ್ಲಾ ಹೆಚ್ಚುವರಿ ಎಸ್ಪಿ ಮುಂಬಡ್ತಿಯಾಗಿ ಅಧಿಕಾರವನ್ನು ವಹಿಸಿಕೊಂಡಿದ್ದು ಇದರಿಂದ ಅವರು ರಾಜಕೀಯ ಸಮಾಜಿಕ ಔದ್ಯೋಗಿಕ ಹಾಗೂ ಆರ್ಥಿಕ ಪ್ರಭಾವವನ್ನು ಬೀರಿಸುವಂತವರಾಗಿದ್ದು ಏಕೆಂದರೆ ಇವರು ಸುಮಾರು ವರ್ಷಗಳಿಂದ ಇಲ್ಲಿ ಕೆಲಸ ಮಾಡಿದ್ದರಿಂದ ಇವರಿಗೆ ಸ್ಥಳೀಯ ಪ್ರಭಾವ ರಾಜಕಾರಣಿಗಳಲ್ಲಿ ಒಳ್ಳೆಯ ಒಡನಾಟ ಇರುವುದರಿಂದ ಇವರು ಪ್ರಭಾವವನ್ನು ಮಧ್ಯೆ ಪ್ರವೇಶಿಸಿ ನ್ಯಾಯದ ಹಾದಿಯನ್ನು ತಿರುಚಿ ಬಿಡುತ್ತಾರೆ ಇವರೇ ಆರೋಪಿಯಾದ 2 ಜಿ.ಹರೀಶ್ ಜಿಲ್ಲಾ ಹೆಚ್ಚುವರಿ ಎಸ್ಪಿ ಆಗಿರುವುದರಿಂದ ಇವರನ್ನು ಈ ಪ್ರಕರಣವು ಮುಗಿಯುವ ವರೆಗೆ ಆರೋಪಿ 2 ಜಿ.ಹರೀಶ್ ಜಿಲ್ಲಾ ಹೆಚ್ಚುವರಿ ಎಸ್ಪಿ ಇವರನ್ನು ರಾಯಚೂರಿನಿಂದ ಬೇರೆ ಕಡೆಗೆ ಕೂಡಲೇ ವರ್ಗಾವಣೆ ಮಾಡಿ ಹಾಗೂ ಇವರನ್ನು ಅಧಿಕಾರ ದುರ್ಬಳಕೆಯ ಮಾಡಿ ಕೊಂಡಂತಹ ಕಾಯ್ದೆಯ ಅಡಿಯಲ್ಲಿ ಇವರನ್ನು ಅಮಾನತ್ತು ಮಾಡಿ ಹಾಗೂ ಅವರ ವಿರುದ್ದ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳ ಬೇಕೆಂದು ಈ ಮೂಲಕ ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿ ಬಳ್ಳಾರಿ ವತಿಯಿಂದ ತಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೀರುವ ಸಂಘಟಕರಾದ ಕೆ.ಶಂಕರ್ ನಂದಿಹಾಳ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಹನುಮೇಶ್ ಕಟ್ಟಿಮನಿ ಜಿಲ್ಲಾ ಕಾರ್ಯಧ್ಯಕ್ಷರು ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ಗೆ ತಿಳಿಸಿದ್ದಾರೆ ಎಂದು ವರದಿಯಾಗಿದೆ.

## ಸರ್ಕಾರಿ ಶಾಲೆಗಳ ಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ಪಠ್ಯ ಪುಸ್ತಕ ವಿತರಣಾ ಸಮಾರಂಭ ಜರುಗಿತು





**ಸಿಹಿ ಕಹಿ ಸುದ್ದಿ,**

**ಕಲಕೇರಿ :** ವಿಜಯಪುರ ಜಿಲ್ಲೆಯ ತಾಳಿಕೋಟಿ ತಾಲೂಕಿನ ಇಂದು ಎಲ್ಲಾ ಸರ್ಕಾರಿ ಶಾಲೆಗಳಿಗೆ ಕಲಕೇರಿಯಲ್ಲಿ ಕೇಂದ್ರ ಸರಕಾರದ ರಾಷ್ಟ್ರೀಯ ಸಾಕ್ಷಾರತ ಮಿಷನ್ ಸದಸ್ಯರಾದ ಶ್ರೀ ಡಾ, ನಾಗರಾಜ್ ಗೌರಿಬಿದನೂರು ಇವರ ಸಾರತ್ಯದಲ್ಲಿ ಕಲಕೇರಿ ಗ್ರಾಮದ ಭಗೀರಥ ಸಮಾಜದ ಮುಖಂಡರಾದ ಭಾಗ್ಯವಂತ ಮೊಪಗಾರ ಇವರು ಕಲಕೇರಿ ಜಿಲ್ಲಾ ಪಂಚಾಯತ ವ್ಯಾಪ್ತಿಗೆ ಸಂಭಂದಿಸಿದ ಶಾಲೆಗಳ ಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ಪಠ್ಯ ಪುಸ್ತಕ ವಿತರಣಾ ಸಮಾರಂಭ ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ನಮ್ಮ ತಾಲೂಕಿನ ಹೆಮ್ಮೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆದ ಶ್ರೀ ಎಂ.ಬಿ ಯಡ್ರಾಮಿ, ಶಾಲೆಗೆ ಭೂದಾನಿಗಳಾದ ಶ್ರೀ ವಿ.ಕೆ ಜಾಲಹಳ್ಳಿಮಠ, ಗ್ರಾಮ ಪಂಚಾಯತ ಅಧ್ಯಕ್ಷರಾದ ಶ್ರೀ ರಾಜಹ್ಮದ ಸಿರಸಗಿ, ಉಪಾಧ್ಯಕ್ಷರು ವಿಜಯಲಕ್ಷ್ಮಿ ಪರಶುರಾಮ ಬೇಡರ, ವಿಶ್ವನಾಥ್ ರಾಠೋಡ್. ಸ್ಥಳೀಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ನಂದಿಮಠ, ಆನಂದ ಅಡಕಿ, ಲಾಳೆಮಶ್ಯಾಕ ವಲ್ಲಿಭಾವಿ, ಭವಾನಿ ಕಂಪ್ಯೂಟರ್ ಅಧ್ಯಕ್ಷರು ಹನಮಂತ ವಡ್ಡರ, ಮಲ್ಲು ನಾವಿ, ಸಿ.ಆರ್.ಪಿ ಯವರಾದ. ಎಸ್ ಎಲ್.ನಾಯ್ಕೋಡಿ, ಸ್ಥಳೀಯ ಶಾಲೆಗಳ ಮುಖ್ಯ ಗುರುಗಳಾದ. ಜೆ.ಬಿ ಕುಲಕರ್ಣಿ, ಡಿ.ಬಿ ಅಡಕಿ, ಎಸ್.ಬಿ ಪಡಶೆಟ್ಟಿ, ಹಾಗೂ ಎಲ್ಲಾ ಶಾಲೆಯ ಮುಖ್ಯ ಗುರುಗಳು ಮತ್ತು ಸಹ ಶಿಕ್ಷಕರು, ಮುದ್ದು ಮಕ್ಕಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ. ತಾಳಿಕೋಟೆ**

## ಮೆಟ್ರೋ ಬೇಕರಿ ಮಾಲೀಕ ಗ್ರಾಹಕರ ಆರೋಗ್ಯ ಜೊತೆ ಚೆಲ್ಲಾಟವಾಡುತ್ತಿದ್ದಾರೆ: ಸಂತೋಷ ಕಡಿವಾಲರ ಆರೋಪ

**ಸಿಹಿ ಕಹಿ ಸುದ್ದಿ,**

**ರೋಣ :** ಪಟ್ಟಣದ ಬಾದಾಮಿ ರಸ್ತೆಯ ಸೂಡಿ ಕ್ರಾಸ್ ಬಳಿ ಇರುವ ಮೆಟ್ರೋ ಬೇಕರಿ ಯೊಂದರಲ್ಲಿ ಅವಧಿ ಮೀರಿದ ಕ್ರೀಮ್ ಕೇಕ್ ಮಾರಾಟ ಮಾಡಿ ಯುವಕರ ಹಾಗೂ ಗ್ರಾಹಕರ ಪ್ರಾಣದ ಜೊತೆ ಬೇಕರಿ ಮಾಲೀಕ ಚೆಲ್ಲಾಟವಾಡುತ್ತಿದ್ದಾನೆ ಎಂದು ರೋಣ ಪಟ್ಟಣದ ಪುರಸಭೆ ಸದಸ್ಯ ಸಂತೋಷ ಕಡಿವಾಲ ಸಾಕ್ಷಿ ಸಮೇತ ನಮ್ಮ ಮಾಧ್ಯಮಕ್ಕೆ ಮಾಹಿತ ಒದಗಿಸಿದರು.

ಇಲ್ಲಿಗೆ ಬರುವ ಪ್ರತಿಯೊಬ್ಬ ನಾಗರಿಕರು ರುಚಿಯ ಜೊತೆಗೆ ಶುಚಿಯಾದ ಬರ್ತ್ಡೇ ಕೇಕ್ ಮಕ್ಕಳಿಗೆ ಚಾಕ್ಲೆಟ್ ಮತ್ತು ಬಿಸ್ಕೆಟ್ ಗಳು ದೊರೆಯುವ ಸುಸಜ್ಜಿತ ಬೇಕರಿಗಳೆಂದು ತಿಳಿದು ಕೊಂಡಿರುತ್ತಾರೆ.

ಅದರಂತೆ ಮೆಲ್ನೋಟಕ್ಕೆ ಸ್ವಚ್ಚವಾಗಿ ಸುಂದರವಾಗಿರುವ ರೋಣ ಸೂಡಿ ಕ್ರಾಸ್ ಬಳಿ ಇರುವ ಮೆಟ್ರೋ ಬೇಕರಿಗೆ ಜೂಲೈ 23 ರಂದು ರೋಣ ನಗರದ ಸಂತೋಷ ಕಡಿವಾಲ ಅವರ ಅಭಿಮಾನಿಗಳು ಹಾಗೂ ಸ್ನೇಹಿತರೊಂದಿಗೆ ಸಂತೋಷ ಅವರ ಹುಟ್ಟು ಹಬ್ಬದ ನಿಮಿತ್ಯ ಸಂತೋಷ ಅವರ ಅಭಿಮಾನಿಗಳು ಹುಟ್ಟು ಹಬ್ಬ ಆಚರಣೆ ಮಾಡಲುಸೂಡಿಕ್ರಾಸ್‌ಬಳಿಇರುವಮೆಟ್ರೋ ಬೇಕರಿಗೆ ಹೋಗಿ ಕೇಕ್ ತಗೆದುಕೊಂಡು ಬಂದಿದ್ದು ಹುಟ್ಟುಹಬ್ಬ ಆಚರಣೆ ಮಾಡುವ ವೇಳೆ ಖರೀದಿಸಿದ ಕೇಕ್ ಅನ್ನು ತಿನ್ನಲು ಕೊಡುವಾಗ ಅವುಗಳು ಅವಧಿ ಮೀರಿ ರುಚಿ ಸವೆಯಲು ಮುಂದಾದಾಗ ಕೊಳೆತ ವಾಸನೆ ಅಂತೇ ಕಹಿ ಯಾಗಿರುವುದು ಕಂಡು ಬರುತ್ತೆ ಸ್ನೇಹಿತರೇ ಇದನ್ನು ಗಮನಿಸಿ ಕೇಕ್ ಕಟ್ ಮಾಡಿ ನೋಡಿದಾಗ ಸಂಪೂರ್ಣ ಕೇಕ್ ಹಾಳಾಗಿ ಅವಧಿ ಮೀರಿರುವುದು ಕಂಡು ಬಂತು ಈ ಬೇಕರಿಯ ಕೇಕ್ ನ ಒಳಗೆ ಕೊಳೆತ ಸ್ಥಿತಿಯಲ್ಲಿದಿದ್ದನ್ನು ಗಮನಿಸಿ, ಬೇಕರಿ ಅವರಿಗೆ ಸಂತೋಷ ಕಡಿವಾಲ ಅವರು ತಿಳಿಸಿದರೇ ಮಾಲೀಕರು ಬೇಕರಿ ಪ್ರಾರಂಭ ಮಾಡುವ ಮುನ್ನ ಪುರಸಭೆಯ ಪರವಾಣಿಗೆಯೂ ಸಹ ಪಡೆಯದಿರುವುದು ಕಂಡು ಬರುತ್ತದೆ ಬಂಧುಗಳೇ ಇದನ್ನೆಲ್ಲಾ ಗಮನಿಸಿದ ಸಂತೋಷ ಅವರು ಕೂಡಲೇ ಪುರಸಭೆ ಸಿಬ್ಬಂದಿಗಳನ್ನ ಸ್ಥಳಕ್ಕೆ ಕರೆಸಿ ಬೇಕರಿ ಅವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಅವರು ನಮ್ಮ ಸಿಹಿ ಕಹಿ ಮಾಧ್ಯಮಕ್ಕೆ ತಿಳಿಸಿದರು.

ಇಂತಹ ದೊಡ್ಡ ಬೇಕರಿಗಳಲ್ಲಿ ಅವಧಿ ಮೀರಿದ ಐಸ್ ಕ್ರೀಮ್ ಮತ್ತು ಬರ್ತ್ಡೇ ಕೇಕ್ ಮಾತ್ರವಲ್ಲದೇ, ಆಹಾರ ಗುಣ ಮಟ್ಟವು ಇದೇ ರೀತಿಯಾಗಿದ್ದೀಯಾ ಎಂದು ಕೂಡಲೇ ಗದಗ ಜಿಲ್ಲಾ ಆಹಾರ ಇಲಾಖೆ ಅಧಿಕಾರಿಗಳು ಮೆಟ್ರೋ ಬೇಕರಿ ವಿರುದ್ದ
















ಸೂಕ್ತ ಕ್ರಮ ಜರುಗಿಸಲು ಮುಂದಾಗಬೇಕಿದೆ ಎಂದು ತಿಳಿಸಿದರು.

ಬೇಕರಿಗಳು ಗ್ರಾಹಕರಿಗೆ ಉತ್ತಮ ಗುಣಮಟ್ಟದ ಆಹಾರ ಹಾಗೂ ಇನ್ನಿತರೇ ಆಹಾರ ಪದಾರ್ಥಗಳನ್ನು ನೀಡಬೇಕಾದ ಅಂಗಡಿ ಮಾಲೀಕರು ತಮಗೆ ಹೊರೆಯಾದ ಬಾಡಿಗೆ ಹಣವನ್ನು ತೆಗೆಯಲು ಇಂತಹ ನೂತನ ಮಾರ್ಗಗಳನ್ನು ಕಂಡುಕೊಂಡ ಅದೇಷ್ಟೋ ಇಂತಹ ಗದಗ ಜಿಲ್ಲಾ ಸೇರಿದಂತೆ ಇನ್ನೂ ಅನೇಕ ಭಾಗಗಳಲ್ಲಿ ಬೇಕರಿ ಮಾಲೀಕರು ಗ್ರಾಹಕರಿಂದ ಹಣ ಫೀಕಲು ಅವಧಿ ಮೀರಿದ ಕೇಕ್ ಹಾಗೂ ಇನ್ನೀತರೆ ವಸ್ತುಗಳನ್ನು ಗ್ರಾಹಕರಿಗೆ ನೀಡುತ್ತಿದ್ದು ಈ ಕೂಡಲೇ ಆಹಾರ ಇಲಾಖೆ ಎಚ್ಚೇತ್ತು–ಕೊಂಡು ಇಂತಹ ಬೇಕರಿ ವಿರುದ್ದ ಕ್ರಮ ಕೈಗೊಳ್ಳಬೇಕು ಎನ್ನುವುದು ಸಾರ್ವಜನಿಕರ ಅಭಿಪ್ರಾಯದೊಂದಿಗೆ ನಮ್ಮ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್ ಮೂಲಕ ಆಗ್ರಹವಾಗಿದೆ.

ಗದಗ ಜಿಲ್ಲಾ ಆಹಾರ ಇಲಾಖೆ ಅಧಿಕಾರಿಗಳೇ ಎಲ್ಲಿದ್ದೀರಾ ನಿಮ್ಮ ಚಿತ್ತ ಗದಗ ಪಟ್ಟಣ ಮತ್ತು ರೋಣದಂತಹ ನಗರಗಳತ್ತ ಹರಿಸುವದರೊಂದಿಗೆ ಸಾರ್ವಜನಿಕರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವ ಮೆಟ್ರೋ ಬೇಕರಿ ರೋಣ ಮಾಲೀಕನಿಗೆ ಕ್ರಮ ಜರುಗಿಸುವುದರೊಂದಿಗೆ ಆ ಬೇಕರಿಯನ್ನು ಸೀಜ್ ಮಾಡಬೇಕೆಂದು ನಮ್ಮ ಮಾಧ್ಯಮದ ಒತ್ತಾಯವಾಗಿದೆ.

ಜೊತೆಗೆ ಮೆಟ್ರೋ ಬೇಕರಿ ರೋಣ ಮಾಲೀಕರಿಗೆಆಹಾರಇಲಾಖೆಅಧಿಕಾರಿಗಳು ಮತ್ತು ಪುರಸಭೆ ಇಲಾಖೆ ಮುಖ್ಯ ಅಧಿಕಾರಿಗಳು ಬೇಕರಿ ಪ್ರಾರಂಭ ಮಾಡುವ ಮುನ್ನ ಪುರಸಭೆ ಪರವಾನಿಗೆ ಪಡೆಯದೇ ಇರುವ ಮೆಟ್ರೋ ಬೇಕರಿ ಮಾಲೀಕರಿಗೆ ಯಾವ ಕ್ರಮ ತೆಗೆದುಕೊಳ್ಳುವರು ಎಂದು ಕಾದು ನೋಡ ಬೇಕಿದೆ.....

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ. ರೋಣ. ಗದಗ**

## ಮಾನವ ಕಳ್ಳ ಸಾಗಾಣಿಕೆ ಬಹುದೊಡ್ಡ ಸಮಸ್ಯೆಯಾಗಿದೆ



**ರಬಕವಿ–ಬನಹಟ್ಟಿ :** ಸಮಾಜದಲ್ಲಿ ಇದೀಗ ಮಾನವ ಕಳ್ಳ ಸಾಗಾಣಿಕೆಯು ಬಹುದೊಡ್ಡ ಸಮಸ್ಯೆಯಾಗಿ ಬೆಳೆದಿದ್ದು, ಅದರಲ್ಲೂ ಮಾನವ ಕಳ್ಳ ಸಾಗಾಣಿಕೆಗೆ ಹೆಚ್ಚಾಗಿಬಲಿಯಾಗುತ್ತಿರುವವರುಮಹಿಳೆಯರುಮತ್ತು ಮಕ್ಕಳು. ಇದರಿಂದ ಎಲ್ಲರೂ ಎಚ್ಚೆತ್ತುಕೊಳ್ಳಬೇಕೆಂದು ಹಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯಾಧೀಶ ಆಶಪ್ಪ ಸಣಮನಿ ಹೇಳಿದರು.

ರಬಕವಿ ಬನಹಟ್ಟಿ ನ್ಯಾಯಾಲಯದ ಆವರಣದಲ್ಲಿ ನಡೆದ ಮಾನವ ಕಳ್ಳಸಾಗಾಣಿಕೆ ತಡೆ ಹಾಗು ದೇವದಾಸಿ ಪದ್ಧತಿ ನಿರ್ಮೂಲನೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಬಡತನದಲ್ಲಿರುವ ಹೆಣ್ಣು ಮಕ್ಕಳಿಗೆ ಹಣ ಸಹಾಯದ ಅಗತ್ಯವಿರುತ್ತದೆ. ಹೆಂಗಸರು ಆಮಿಷಗಳಿಗೆ ಬಲಿಯಾಗಿ ಮೋಸ ಹೋಗುವದನ್ನು ತಡೆಯಬೇಕು. ಮಕ್ಕಳನ್ನು ಪೋಷಕರು ತುಂಬಾ ಜಾಗೃತೆಯಿಂದ ಬೆಳೆಸಬೇಕು. ಮಕ್ಕಳಿಗೆ ಯಾವುದು ಸರಿ ಯಾವುದು ತಪ್ಪು ಎಂಬ ವಿಚಾರಗಳನ್ನು ತಿಳಿಸಿ ಹೇಳಬೇಕೆಂದರು.

ಅನಿಷ್ಠ ಪದ್ಧತಿಯಾದ ದೇವದಾಸಿ ಪದ್ಧತಿ ನಿರ್ಮೂಲನೆಗೆ ಸರ್ಕಾರವು ಹಲವಾರು ಕಾನೂನು ಜಾರಿಗೆ ತಂದಿದೆ. ಅವುಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ದೇವದಾಸಿಯರಿಗೆ ಸರಕಾರಿ ಸೌಲಭ್ಯಗಳು ದೊರೆಯದಿದ್ದರೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಗಮನಕ್ಕೆ ತರಬೇಕೆಂದರು.

ಹಿರಿಯ ನ್ಯಾಯವಾದಿ ಎಂ. ಪಿ. ಮದರಖಂಡಿ ಮಾತನಾಡಿ, ದೇವದಾಸಿ ಪದ್ಧತಿ ನಿರ್ಮೂಲನೆಗೆ ಸರ್ಕಾರದಿಂದ ಜಾಗೃತಿ, ಆರೋಗ್ಯ ಶಿಬಿರ ನಡೆಸಲಾಗುತ್ತಿದೆ. ದೇವದಾಸಿ ಮಹಿಳೆಯರಿಗೆ ಸ್ವ ಉದ್ಯೋಗಕ್ಕೆ ಸಾಲ ಸೌಲಭ್ಯ, ಸಹಾಯ ಧನ ನೀಡಲಾಗುವದು. ಮಾಜಿ ದೇವದಾಸಿಯರಿಗೆ ಮಾಸಾಶನ, ವಸತಿ ಸೌಲಭ್ಯಗಳನ್ನು ಸಹ ಕಲ್ಪಿಸಲಾಗುತ್ತಿದೆ ಎಂದರು. ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯದರ್ಶಿ ರವೀಂದ್ರ ಸಂಪಗಾಂವಿ, ಆರ್. ಡಿ. ಸರಿಕರ, ಎಂ. ಜಿ. ಕೆರೂರ, ಎ. ಎಂ. ಪೆಂಢಾರಿ, ರವೀಂದ್ರ ಕಾಮಗೊಂಡ, ಎ. ಎಸ್. ಗಾಡಬೋಲೆ, ಎಸ್. ಕೆ. ಕೋಪರ್ಡೆ, ಸುಜಾತಾ ನಿಡೋಣಿ, ಬಿ. ಆರ್. ಮದರಖಂಡಿ ಸೇರಿದಂತೆ ಇನ್ನೂ ಅನೇಕ ವಕೀಲರು ಪಾಲ್ಗೊಂಡಿದ್ದರು.

## "ಕಣ್ಣಿಗೆ ಕಾಣುವ ದೇವರು ಅಪ್ಪ".....

**ಸಿಹಿ ಕಹಿ ಸುದ್ದಿ,**





**ಅಪ್ಪ ಇಂದು ನೀನು ಹುಟ್ಟಿದ ದಿನ**
**ತಿಳಿಸುವೆ ನಿನಗೆ ನನ್ನ ಕೋಟಿ ನಮನ**
**ಕಾರಣ ನೀನು ನನಗೆ ದೇವರ ಸಮಾನ**
**ಹುಟ್ಟು ಹಬ್ಬದ ಶುಭಾಶಯಗಳು ಅಪ್ಪ**
**ಮಕ್ಕಳ ಓದು ಬರಹಕ್ಕೆ ಮಹತ್ವ ನೀಡಿದವರು**
**ಸಂಸ್ಕಾರದ ದಾರಿ ತೋರಿಸಿದವರು**
**ಸೋಲಿನಲ್ಲಿ ಧೈರ್ಯ ತುಂಬಿದವರು**
**ಅಪ್ಪ ಕಣ್ಣಿಗೆ ಕಾಣುವ ದೇವರು**
**ಬದುಕಿನ ಉದ್ದಕ್ಕೂ ಭರವಸೆಯ ಬೆಳಕು ಅಪ್ಪ**
**ಜೊತೆಯಲ್ಲಿದ್ದರೆ ಹೇಳತೀರದ ಭದ್ರತೆಯ ಭಾವ ಅಪ್ಪ**
**ಅಮ್ಮ ಕಣ್ಣಾದರೆ ಕಣ್ಣನ್ನು ರಕ್ಷಿಸುವ ರೆಪ್ಪೆ ಅಪ್ಪ**
**ಎಲ್ಲವನ್ನು ಎದುರಿಸಿ ಮತ್ತೆ ನಿಲ್ಲಬಲ್ಲ ಪರ್ವತ ಅಪ್ಪ**
**ಎತ್ತಿ ಆಡಿಸಿ ಮುತ್ತು ಕೊಟ್ಟು ಸಾಕಿದೆ ನೀನು ಅಪ್ಪ**
**ಬದುಕೆಂಬ ಪಯಣದಲ್ಲಿ ದಾರಿ ದೀಪವಾದೆ ನೀನು ಅಪ್ಪ**
**ಪರಿವಾರದ ದೋಣಿಯನ್ನು ಸಾಗಿಸುವ ನಾವಿಕ ನೀನು ಅಪ್ಪ**
**ಜನ್ಮ ಜನ್ಮಾಂತರಾ ಋಣ ತೀರಿಸಲಾಗದ ಭಗವಂತ ಅಪ್ಪ**
**ನನ್ನ ಬದುಕಿನ ಭರವಸೆಯ ದಿಕ್ಸೂಚಿ ಅಪ್ಪ**
**ಸಾಧನೆಯನ್ನು ಹುಡುಕಿ ಸಾಗು ಎಂದು ಹೇಳಿದಾತ ಅಪ್ಪ**
**ಬದುಕೆಂದರೆ ಧೈರ್ಯ ಎಂದು ಅರ್ಥ ಮಾಡಿಸಿದ್ದು ಅಪ್ಪ**
**ಜಗತ್ತಿನಲ್ಲಿ ಎಂದೂ ಬದಲಾಗದ ವ್ಯಕ್ತಿತ್ವ ಅಪ್ಪ**

**ಇಂತಿ ನಿಮ್ಮ ಮಗಳು**
**ಜ್ಯೋತಿ**

# ಕೊರಳಲ್ಲಿಯ ಚೈನು ಕಳವು ಯತ್ನ ವಿಫಲ:

## ಮಹಿಳೆಯ ಪ್ರಸಂಗಾವಧಾನದಿಂದ ಕಳ್ಳತನದ ಯತ್ನ ವಿಫಲ



**ಜಮಖಂಡಿ :** ಇಲ್ಲಿಯ ಮನೆಯೊಂದರಲ್ಲಿ ಮಹಿಳೆ ಒಂಟಿಯಾಗಿರುವುದನ್ನು ಗಮನಿಸಿದ್ದ ಕಳ್ಳರ ಗುಂಪೊಂದು ಹೊಂಚುಹಾಕಿ ಕಳ್ಳತನಕ್ಕೆ ಯತ್ನ ನಡೆಸಿ ವಿಫಲರಾದ ಘಟನೆ ನಗರದ ಕುಂಚನೂರ ರಸ್ತೆಯಲ್ಲಿನ ಗೌತಮ ಬುದ್ಧ ಬಡಾವಣೆಯಲ್ಲಿ ನಡೆದಿದೆ.

ನಗರದ ನಿವಾಸಿ ಶ್ರೀಮತಿ ಪೃಥ್ವಿ ಪ್ರದೀಪ ನವಣಿ ಎಂಬುವರು ಒಂಟಿಯಾಗಿದ್ದಾರೆಂಬುದನ್ನು ಗಮನಿಸಿದ ಕಳ್ಳರ ಗುಂಪು ಮದ್ಯಾಹ್ನ 12 ಗಂಟೆ ಹೊತ್ತಿಗೆ ಮನೆಗೆ ಬಂದು ಬಾಗಿಲು ಬಾರಿಸಿ ಮಹಿಳೆಯನ್ನು ಹೊರಗೆ ಕರೆದು ಹಿಂದಿ ಭಾಷೆಯಲ್ಲಿ ಮಾತನಾಡುತ್ತ ಮಹಿಳೆಯ ಚಿತ್ತವನ್ನು ಬೇರೆಡೆ ಸೆಳೆದು ಕೊರಳಲ್ಲಿಯ ಸರ ಕಳ್ಳತನಕ್ಕೆ ಯತ್ನಿಸಿದ್ದಾರೆ.

ಸೂಕ್ಷ್ಮವಾಗಿ ಗಮನಿಸಿದ ಮಹಿಳೆ ದಿಟ್ಟತನ ಪ್ರದರ್ಶಿಸಿದ್ದು ಪಕ್ಕದಲ್ಲಿದ್ದ ಜಿರಳೆ ಕ್ರಿಮಿನಾಷಕ ಔ?ಷಧಿಯ ಬಾಟಲಿಯನ್ನು ಕಳ್ಳರ ಮುಖಕ್ಕೆ ಸ್ಪ್ರೇ ಮಾಡಿದ್ದಾರೆ. ಇದರಿಂದ ವಿಚಲಿತರಾದ ಕಳ್ಳರು ಅಲ್ಲಿಂದ ಫರಾರಿಯಾಗಿದ್ದಾರೆ.

ಮಹಿಳೆಯ ಪ್ರಸಂಗಾವಧಾನದಿಂದಾಗಿ ಮುಂದೆ ಸಂಭವಿಸಬಹುದಾಗಿದ್ದ ಕಳ್ಳತನದ ಯತ್ನ ವಿಫಲವಾಗಿದೆ.

ಘಟನಾ ಸ್ಥಳಕ್ಕೆ ನಗರದ ಪಿ.ಎಸ್.ಐ. ಅನಿಲ ಕುಂಬಾರ, ಕ್ರೈಂ ವಿಭಾಗದ ಪಿ.ಎಸ್.ಐ. ಎಚ್.ಎಚ್. ಹೊಸಮನಿ ಘಟನಾ ಸ್ಥಳಕ್ಕೆ ಭೇಟಿ ನೀಡುವ ಮೂಲಕ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ನಗರದ ಮಹಿಳೆಯರು ಜಾಗರೂಕರಾಗಿರುವಂತೆ ಪೊಲೀಸರು ಮನವಿ ಮಾಡಿದ್ದಾರೆ.

# ಮೌಲನಾ ಆಂಗ್ಲ ಶಾಲೆಯಲ್ಲಿ ಕಲಿಕಾ ಶಿಕ್ಷಕರಿಗೆ ಸನ್ಮಾನ



**ಜಮಖಂಡಿ :** ನಗರದ ಮುಧೋಳ ರಸ್ತೆಯಲ್ಲಿರುವ ಮೌಲಾನಾ ಆಜಾದ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ತರಬೇತಿಯಲ್ಲಿರುವ ಕಲಿಕಾ ಶಿಕ್ಷಕರ ಇಂಟರಶಿಪ್ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ಕಠಿಣ ಪರಿಶ್ರಮ, ಕಲಿಕೆ ಉತ್ಸಾಹಕ್ಕೆ, ತರಬೇತಿ ಅವಧಿಯಲ್ಲಿ ತರಬೇತಿಯಲ್ಲಿರುವ ಕಲಿಕಾ ಶಿಕ್ಷಕರು ತೋರಿದ ಬದ್ಧತೆ ಮತ್ತು ಕಲಿಯುವಿಕೆಗೆ ನೀಡಿದ ಕೊಡುಗೆಯನ್ನು ಗಮನಿಸಿ ತರಬೇತಿಯ ಕಲಿಕಾ ಶಿಕ್ಷಕರನ್ನು ಮೌಲಾನಾ ಆಜಾದ್ ಆಂಗ್ಲ ಮಾಧ್ಯಮ ಶಾಲೆ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ಕಲಿಕಾ ಶಿಕ್ಷಕರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# ಶೀಘ್ರ ಮೇಯರ್ ಚುನಾವಣೆ ನಡೆಸಿ: ಮಾಜಿ ಮೇಯರ್ ಇಬ್ರಾಹಿಂ ಬಾಬು ಅಗ್ರಹ



**ಬಳ್ಳಾರಿ :** ಮೇಯರ್ ಚುನಾವಣೆಯನ್ನು ನಡೆಸಲು ಜಿಲ್ಲಾ ಕಾಂಗ್ರೆಸ್ ಹರಸಹಾಸ ಪಡುತ್ತಿದೆ, ಕೇವಲ ಒಂದು ಮೇಯರ್ ಆಯ್ಕೆಗೆ ಇಷ್ಟು ಗೊಂದಲಗಳಿದ್ದಲ್ಲಿ ನಗರದ ನಾಗರಿಕರಿಗೆ ಇವರು ಯಾವ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಲು ಕೆಲಸ ಮಾಡುತ್ತಾರೆ ನಿಮ್ಮ ಒಳ ಜಗಳ ಮತ್ತು ನ್ಯಾಯಾಲಯದ ದಾವೆಯನ್ನು ಬದಿಗಿಟ್ಟು ಕೂಡಲೇ ಮೇಯರ್ ಚುನಾವಣೆಯನ್ನು ನಡೆಸಿ ನಗರದ ಸಾರ್ವಜನಿಕರಿಗಾಗಿ ಕೆಲಸ ಮಾಡಿ ಎಂದು ಮಾಜಿ ಮೇಯರ್ ಇಬ್ರಾಹಿಂ ಬಾಬು ಕಾಂಗ್ರೆಸ್ ಪಾಲಿಕೆ ಸದಸ್ಯರು ಮತ್ತು ಪಕ್ಷವನ್ನು ಆಗ್ರಹಿಸಿದರು.

ಅವರಿಂದು ನಗರದ ಬಾಲ ಹೋಟೆಲ್ ನಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿ, ನಿಮ್ಮ ನಿಮ್ಮ ಅಧಿಕಾರಕ್ಕಾಗಿ ಬಡಿದಾಡಿಕೊಳ್ಳುತ್ತಾ ಇದ್ದರೆ ನಗರದ ಸಾರ್ವಜನಿಕರ ಪರಿಸ್ಥಿತಿ ಏನು ? ಪದೇ ಪದೇ ಮಳೆ ಬರುತ್ತದೆ ಚರಂಡಿಗಳು ತುಂಬಿ ಹರಿಯುತ್ತವೆ ಕುಡಿಯುವ ನೀರು ಕಲಿಸಿಕೊಳ್ಳುತ್ತಿದೆ ರಸ್ತೆಗಳಲ್ಲಿ ತಗ್ಗು ಗುಂಡಿಗಳು ಬಿದ್ದು ಹಾಳಾಗಿದೆ ಇದು ಯಾವುದನ್ನು ಗಮನಿಸದೇ ನೀವು ಕೇವಲ ಅಧಿಕಾರಕ್ಕಾಗಿ ಕಿತ್ತಾಡಿಕೊಳ್ಳುತ್ತಿದ್ದೀರಿ ಇದು ನಿಮಗೆ ಸಮಂಜಸವೇ? ಹೀಗೆ ನಿಮ್ಮ ಕಚ್ಚಾಟವನ್ನು ಮುಂದುವರಿಸಿಕೊಂಡು ಹೋದಲ್ಲಿ ನಗರದ ಮತದಾರರು ಮುಂದಿನ ದಿನಗಳಲ್ಲಿ ನಿಮ್ಮ ಪಕ್ಷಕ್ಕೆ ತಕ್ಕ ಪಾಠ ಕಲಿಸುತ್ತಾರೆ ಎಂದು ಎಚ್ಚರಿಕೆಯನ್ನು ನೀಡಿದರು. ಬಿಜೆಪಿ ಪಾಲಿಕೆಯಲ್ಲಿ ಆಡಳಿತ ನಡೆಸುತ್ತಿದ್ದಾಗ ಇಂತಹ ಗೊಂದಲಗಳಿಗೆ ಎಡೆ ಮಾಡಿಕೊಡುತ್ತಿದ್ದಿಲ್ಲ ಮೀಸಲಾತಿಯಂತೆ ಚುನಾವಣೆ ನಡೆದು ಮೇಯರ್ ಆಯ್ಕೆ ಮಾಡಲಾಗುತ್ತಿತ್ತು, ಇದರಿಂದ ವೃಥಾ ಕಾಲಹರಣ ತಪ್ಪುತಿತ್ತು ಮತ್ತು ಜನರಿಗೆ ಒಳ್ಳೆಯ ಆಡಳಿತ ಮತ್ತು ಸೇವೆಯನ್ನು ನೀಡಲು ಸಹಕಾರಿಯಾಗುತ್ತಿತ್ತು, ಆದರೆ ನಿಮ್ಮ ಅಧಿಕಾರದ ದಾಹದಿಂದ ನಗರದ ಜನತೆ ಸಮಸ್ಯೆ ಎದುರಿಸುತ್ತಿದ್ದಾರೆ, ಮೇಯರ್ ಚುನಾವಣೆ ಗೊಂದಲದಿಂದ ಪಾಲಿಕೆಯ ಆಡಳಿತಕ್ಕೆ ತುಕ್ಕು ಹಿಡಿಯಲಿದೆ ಇದರಿಂದ ಕಂದಾಯ ಮತ್ತು ತೆರಿಗೆಗಳನ್ನು ಸಂಗ್ರಹಿಸಲು ಸಹ ಕಷ್ಟವಾಗುತ್ತದೆ ಕೂಡಲೇ ಮೇಯರನ್ನು ಆಯ್ಕೆ ಮಾಡಿ ನಗರದ ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಇಬ್ರಾಹಿಂ ಬಾಬು ಕಾಂಗ್ರೆಸ್ ಪಕ್ಷವನ್ನು ಆಗ್ರಿಸಿದರು. ಈ ಸಂದರ್ಭದಲ್ಲಿ ಬಿಜೆಪಿಯ ಪಾಲಿಕೆ ಸದಸ್ಯರಾದ ಕೆ ಹನುಮಂತಪ್ಪ, ಗುಡಿಗಂಟೆ ಹನುಮಂತಪ್ಪ, ಮೋತ್ಕರ್ ಶ್ರೀನಿವಾಸ್, ಕೆ ಅಶೋಕ್ ಕುಮಾರ್, ಸುರೇಖಾ ಮಲ್ಲನಗೌಡ ಸೇರಿದಂತೆ ಪಕ್ಷದ ವಿವಿಧ ಮಂಡಲ ಮತ್ತು ಘಟಕಗಳ ಪದಾಧಿಕಾರಿಗಳು ಮತ್ತು ಮುಖಂಡರಿದ್ದರು.

# ಕರ್ನಾಟಕ ರಾಜ್ಯ ಬಣಜಿಗ ಸಮಾಜದಿಂದ ಪ್ರತಿಭಾ ಪುರಸ್ಕಾರ: ವಿದ್ಯಾರ್ಥಿಗಳು, ಸಾಧಕರಿಗೆ ಸನ್ಮಾನ



**ಅಥಣಿ :** ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು, ತಾಲ್ಲೂಕು ಘಟಕ ಅಥಣಿ ವತಿಯಿಂದ ಅಥಣಿ ಹಾಗೂ ಕಾಗವಾಡ ತಾಲ್ಲೂಕುಗಳ ಎಸ್.ಎಸ್.ಎಲ್.ಸಿ, ಪಿಯುಸಿ ಮತ್ತು ಸಿಬಿಎಸ್ ಸಿ.ಪರೀಕ್ಷೆಗಳಲ್ಲಿ 85% ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಗೌರವಾನ್ವಿತರಿಗೆ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭವು ಅಥಣಿ ತಾಲ್ಲೂಕಿನ ಶಿವಣಗಿ ಸಾಂಸ್ಕೃತಿಕ ಭವನದಲ್ಲಿ ಯಶಸ್ವಿಯಾಗಿ ನೆರವೇರಿತು.

ಕಾರ್ಯಕ್ರಮದಲ್ಲಿ ಲೋಕಸಭಾ ಸದಸ್ಯ ಜಗದೀಶ್ ಶೆಟ್ಟರ್ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರು ಭಾಗವಹಿಸಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಲೋಕಸಭಾ ಸದಸ್ಯ ಜಗದೀಶ್ ಶೆಟ್ಟರ್, "ಇದು ಸಮಾಜವನ್ನು ಒಗ್ಗೂಡಿಸುವ ವಿಶೇಷ ಕಾರ್ಯಕ್ರಮ. ಬಣಜಿಗ ಸಮಾಜದ ಬಂಧುಗಳು ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ನಡೆಸಿಕೊಳ್ಳುವಂತ ಸಮಾಜ. 12ನೇ ಶತಮಾನದಲ್ಲಿ ಸಮಾನತೆಯ ಬೀಜ ಬಿತ್ತಿದ ಬಸವಣ್ಣನವರು ಸಮಾಜಕ್ಕೆ ಆದರ್ಶ ವ್ಯಕ್ತಿ. ಬಸವಣ್ಣನವರ ಅನುಯಾಯಿಗಳು ಬಣಜಿಗ ಸಮಾಜದವರು" ಎಂದರು.

"ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವುದರಿಂದ ಸಮಾಜದ ಮಕ್ಕಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ನಿಮ್ಮ ಕೆಲಸ ಇಲ್ಲಿಗೆ ಸೀಮಿತವಾಗಬಾರದು" ಎಂದು ತಿಳಿಸಿದರು. ಅಲ್ಲದೆ, "ನಾನು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಸಮಾಜಕ್ಕೆ 2ಎ ಮೀಸಲಾತಿ ಕಲ್ಪಿಸಿದ್ದೆ" ಎಂದು ಸ್ಮರಿಸಿದರು.

ನಂತರ ಮಾತನಾಡಿದ ಶಾಸಕ ಲಕ್ಷ್ಮಣ ಸವದಿ ಅವರು, ವಿದ್ಯಾರ್ಥಿಗಳಿಗೆ ಕಳಕಳಿಯ ಮನವಿ ಮಾಡಿದರು. "ತಾವು ಕಲಿತು ಉನ್ನತ ಸ್ಥಾನದಲ್ಲಿದ್ದಾಗ, ತಮ್ಮನ್ನು ಸಾಕಿ ಸಲುಹಿ ವಿದ್ಯಾವಂತರನ್ನಾಗಿ ಮಾಡಿದ ತಂದೆ-ತಾಯಿಯನ್ನು ಹಾಗೂ ತಮ್ಮ ಸಂಸ್ಕಾರವನ್ನು ಯಾವತ್ತೂ ಮರೆಯಬಾರದು. ನಿಮ್ಮ ತಂದೆ-ತಾಯಿಯ ಬಗ್ಗೆ ಹೆಚ್ಚು ಗೌರವ ಮತ್ತು ಕಾಳಜಿ ಇಟ್ಟುಕೊಂಡು ಎಷ್ಟೇ ಎತ್ತರಕ್ಕೆ ಬೆಳೆದರೂ ಎಲ್ಲರಿಗೂ ಹೆಮ್ಮೆ ಎನಿಸುತ್ತದೆ" ಎಂದರು. "ಸಮಾಜದ ಹಿರಿಯರೆಲ್ಲರೂ ಸೇರಿ ಸಮಾಜದಲ್ಲಿ ಉತ್ತಮ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಸಮಾಜಕ್ಕೆ ಪರಿಚಯಿಸಿ, ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗುವ ಉದ್ದೇಶದಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶೆಟ್ಟರ ಮಠದ ಪ. ಪೂ. ಶ್ರೀ ಮರುಳಸಿದ್ದ ಸ್ವಾಮೀಜಿ ಅವರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಈ ವೇಳೆ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ರೊಡಗಿ, ಶಿವಾನಂದ ಬಿದರಿ, ರಾಜು ಕೊಳಲಗಿ, ಡಾ. ಮಲ್ಲಿಕಾರ್ಜುನ ಹಂಜಿ, ಮಲ್ಲಿಕಾರ್ಜುನ್ ಕನಶಟ್ಟಿ, ಸಂಗಪ್ಪ ಉಣ್ಣಿ, ಶಿವಯೋಗಿ ಗೆಜ್ಜಿ, ಶಿವಾನಂದ ಹಂಜಿ, ಸಂತೋಷ ಸಾವಡಕ, ಅಶೋಕ ಹಂಜಲಿ, ಅಲ್ಲಪ್ಪ ನಿಡೋಣಿ, ಶಂಕರ ಬು, ಸುರೇಶ್ ಗೊಟಕಿಂಡಿ, ಮಲ್ಲಿಕಾರ್ಜುನ್ ಗೊಟಕಿಂಡಿ ಸೇರಿದಂತೆ ಸಮಾಜದ ಹಲವು ಗಣ್ಯರು ಉಪಸ್ಥಿತರಿದ್ದರು.

**ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಪಟ್ಟಣಕ್ಕೆ ಬರಬೇಕಾದ ಸಂದರ್ಭದಲ್ಲಿ, ಅಂತಹ ಮಕ್ಕಳಿಗೆ ಉಚಿತ ವಸತಿಗಾಗಿ ಕಟ್ಟಡ ನಿರ್ಮಿಸಿದರೆ ಬಡ ಮಕ್ಕಳು ಸಹ ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ ಎಂದು ಲಕ್ಷ್ಮಣ ಸವದಿ ಅಭಿಪ್ರಾಯಪಟ್ಟರು. "ತಾವು ಕಟ್ಟಡ ಕಟ್ಟುವ ನಿರ್ಧಾರ ಮಾಡಿದರೆ, ನಾನು ಇದಕ್ಕೆ ಮಾಡಬೇಕಾದ ಸಹಾಯ-ಸಹಕಾರವನ್ನು ಮನಃಪೂರ್ವಕವಾಗಿ ಮಾಡುತ್ತೇನೆ" ಎಂದು ಭರವಸೆ ನೀಡಿದರು.**

**-ಲಕ್ಷ್ಮಣ್ ಸವದಿ**
**ಶಾಸಕರು ಮತಕ್ಷೇತ್ರ ಅಥಣಿ**

# ಕಾರ್ಮಿಕರ ರಾಜ್ಯ ವಿಮಾ ನಿಗಮ: ಸಾಮಾಜಿಕ ಭದ್ರತಾ ವ್ಯಾಪ್ತಿ ವಿಸ್ತರಣೆಗೆ ಹೊಸ ಯೋಜನೆ

**ಕೊಪ್ಪಳ :** ನೌಕರರ ರಾಜ್ಯ ವಿಮಾ ನಿಗಮ (ESIC) ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಮತ್ತು ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯಾ ಅವರ ಅಧ್ಯಕ್ಷತೆಯಲ್ಲಿ ನಡೆದ 196 ನೇ ಇಖಖ ಕಾರ್ಪೊರೇಷನ್ ಸಭೆಯಲ್ಲಿ ಖಕಖಇಇ 2025 ಅಂದರೆ ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿಯನ್ನು ಉತ್ತೇಜಿಸುವ ಯೋಜನೆಯನ್ನು ಅನುಮೋದಿಸಿದೆ.

ಎಸ್‌ಪಿಆರ್‌ಇಇ 2025:

ನೌಕರರ ರಾಜ್ಯ ವಿಮಾ ನಿಗಮ (ಇಎಸ್‌ಐಸಿ) ಅನುಮೋದಿಸಿದ ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿಯನ್ನು ಉತ್ತೇಜಿಸುವ ಯೋಜನೆ (ಎಸ್‌ಪಿಆರ್‌ಇಇ) 2025, ಇಎಸ್‌ಐ ಕಾಯ್ದೆಯಡಿಯಲ್ಲಿ ಸಾಮಾಜಿಕ ಭದ್ರತಾ ವ್ಯಾಪ್ತಿಯನ್ನು ವಿಸ್ತರಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯು ಜುಲೈ 1 ರಿಂದ ಡಿಸೆಂಬರ್ 31, 2025 ರವರೆಗೆ ಸಕ್ರಿಯವಾಗಿರುತ್ತದೆ ಮತ್ತು ನೋಂದಾಯಿಸದ ಉದ್ಯೋಗದಾತರು ಮತ್ತು ಉದ್ಯೋಗಿಗಳು, ಗುತ್ತಿಗೆ ಮತ್ತು ತಾತ್ಕಾಲಿಕ ಕೆಲಸಗಾರರು ಸೇರಿದಂತೆ ತಪಾಸಣೆ ಅಥವಾ ಹಿಂದಿನ ಬಾಕಿಗಳ ಬೇಡಿಕೆಗಳನ್ನು ಎದುರಿಸದೆ ನೋಂದಾಯಿಸಿಕೊಳ್ಳಲು ಒಂದು ಬಾರಿ ಅವಕಾಶವನ್ನು ಒದಗಿಸುತ್ತದೆ.

ಎಸ್‌ಪಿಆರ್‌ಇಇ 2025 ರ ಅಡಿಯಲ್ಲಿ ಉದ್ಯೋಗದಾತರು ತಮ್ಮ ಘಟಕಗಳು ಮತ್ತು ಉದ್ಯೋಗಿಗಳನ್ನು ಇಎಸ್‌ಐಸಿ ಪೋರ್ಟಲ್, ಶ್ರಮ ಸುವಿಧಾ ಮತ್ತು ಎಂಸಿಎ ಪೋರ್ಟಲ್ ಮೂಲಕ ಡಿಜಿಟಲ್ ರೂಪದಲ್ಲಿ ನೋಂದಾಯಿಸಿಕೊಳ್ಳಬಹುದು. ಉದ್ಯೋಗದಾತರು ಘೋಷಿಸಿದ ದಿನಾಂಕದಿಂದ ನೋಂದಣಿಯನ್ನು ಮಾನ್ಯವೆಂದು ಪರಿಗಣಿಸಲಾಗುತ್ತದೆ. ನೋಂದಣಿಗೆ ಮುಂಚಿನ ಅವಧಿಗಳಿಗೆ ಯಾವುದೇ ಕೊಡುಗೆ ಅಥವಾ ಪ್ರಯೋಜನ ಅನ್ವಯಿಸುವುದಿಲ್ಲ. ನೋಂದಣಿ ಪೂರ್ವ ಅವಧಿಗೆ ಯಾವುದೇ ತಪಾಸಣೆ ಅಥವಾ ಹಿಂದಿನ ದಾಖಲೆಗಳಿಗೆ ಬೇಡಿಕೆಯನ್ನು ಮಾಡಲಾಗುವುದಿಲ್ಲ.

ಹಿಂದಿನ ದಂಡಗಳ ಭಯವನ್ನು ತೆಗೆದುಹಾಕುವ ಮೂಲಕ ಮತ್ತು ನೋಂದಣಿ ಪ್ರಕ್ರಿಯೆಯನ್ನು ಸರಾಗಗೊಳಿಸುವ ಮೂಲಕ ಈ ಯೋಜನೆಯು ಸ್ವಯಂಪ್ರೇರಿತ ಅನುಸರಣೆಯನ್ನು ಪ್ರೋತ್ಸಾಹಿಸುತ್ತದೆ. ಎಸ್‌ಪಿಆರ್‌ಇಇ ಗಿಂತ ಮೊದಲು, ನಿರ್ದಿ?ಟ ಸಮಯದ ಚೌಕಟ್ಟಿನೊಳಗೆ ನೋಂದಣಿ ಮಾಡದಿರುವುದು ಕಾನೂನು ಕ್ರಮ ಮತ್ತು ಹಿಂದಿನ ಬಾಕಿಗಳ ಬೇಡಿಕೆಗೆ ಕಾರಣವಾಗಬಹುದು. ಎಸ್‌ಪಿಆರ್‌ಇಇ 2025 ಈ ಅಡೆತಡೆಗಳನ್ನು ಪರಿಹರಿಸುತ್ತದೆ, ಬಿಟ್ಟುಹೋದ ಸಂಸ್ಥೆಗಳು ಮತ್ತು ಕಾರ್ಮಿಕರನ್ನು ಇಎಸ್‌ಐ ವ್ಯಾಪ್ತಿಗೆ ತರುವ ಮತ್ತು ವಿಶಾಲವಾದ ಸಾಮಾಜಿಕ ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ.

ಎಸ್‌ಪಿಆರ್‌ಇಇ 2025 ಅನ್ನು ಪ್ರಾರಂಭಿಸುವುದು ನೌಕರರ ರಾಜ್ಯ ವಿಮಾ ನಿಗಮವು ಎಲ್ಲರನ್ನೂ ಒಳಗೊಳ್ಳುವ ಮತ್ತು ಪ್ರವೇಶಿಸಬಹುದಾದ ಸಾಮಾಜಿಕ ಭದ್ರತೆಯ ಕಡೆಗೆ ಇಟ್ಟಿರುವ ಪ್ರಗತಿಪರ ಹೆಜ್ಜೆಯಾಗಿದೆ. ನೋಂದಣಿ ಪ್ರಕ್ರಿಯೆಯನ್ನು ಸರಳಗೊಳಿಸುವ ಮೂಲಕ ಮತ್ತು ಹಿಂದಿನ ಹೊಣೆಗಾರಿಕೆಗಳಿಂದ ವಿನಾಯಿತಿ ನೀಡುವ ಮೂಲಕ ಈ ಯೋಜನೆಯು ಉದ್ಯೋಗದಾತರು ತಮ್ಮ ಕಾರ್ಯಪಡೆಯನ್ನು ಕ್ರಮಬದ್ಧಗೊಳಿಸಲು ಪ್ರೋತ್ಸಾಹಿಸುವುದಲ್ಲದೆ, ಹೆಚ್ಚಿನ ಕಾರ್ಮಿಕರು, ವಿಶೇ?ವಾಗಿ ಗುತ್ತಿಗೆ ವಲಯಗಳಲ್ಲಿರುವವರು, ಇಎಸ್‌ಐ ಕಾಯ್ದೆಯಡಿಯಲ್ಲಿ ಅಗತ್ಯ ಆರೋಗ್ಯ ಮತ್ತು ಸಾಮಾಜಿಕ ಪ್ರಯೋಜನಗಳನ್ನು ಪಡೆಯುವುದನ್ನು ಖಚಿತಪಡಿಸುತ್ತದೆ. ಭಾರತದಲ್ಲಿ ಕಲ್ಯಾಣ ಕೇಂದ್ರಿತ ಕಾರ್ಮಿಕ ಪರಿಸರ ವ್ಯವಸ್ಥೆಯ ದೃಷ್ಟಿಕೋನಕ್ಕೆ ಅನುಗುಣವಾಗಿ, ತನ್ನ ವ್ಯಾಪ್ತಿಯನ್ನು ಬಲಪಡಿಸಲು ಮತ್ತು ಸಾರ್ವತ್ರಿಕ ಸಾಮಾಜಿಕ ರಕ್ಷಣೆಯ ಆದೇಶವನ್ನು ಪೂರೈಸಲು ಇಎಸ್‌ಐಸಿ ಬದ್ಧವಾಗಿದೆ ಎಂದು ಕಾರ್ಮಿಕರ ರಾಜ್ಯ ವಿಮಾ ನಿಗಮದ ಪ್ರಕಟಣೆ ತಿಳಿಸಿದೆ.

# ಮಂಗಳಾಪುರಕ್ಕೆ ಸ್ಮಶಾನ ಭೂಮಿ ಮಂಜೂರು

**ಕೊಪ್ಪಳ :** ತಾಲ್ಲೂಕಿನ ಮಂಗಳಾಪುರದ ಜನರಿಗೆ ಸಮಸ್ಯೆಯಾಗಿದ್ದ ಸ್ಮಶಾನ ಜಾಗದ ಕೊರತೆಯನ್ನು ಜಿಲ್ಲಾಡಳಿತ ನೀಗಿಸಿದ್ದು,

20 ಗಂಟೆ ಸರ್ಕಾರಿ ಭೂಮಿಯನ್ನು ಸ್ಮಶಾನಕ್ಕಾಗಿ ಮಂಜೂರು ಮಾಡಿ ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಅವರು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಗ್ರಾಮದ ಜನರಿಗೆ ಸ್ಮಶಾನ ಜಾಗದ ಕೊರತೆಯಿದ್ದ ಕಾರಣ ಗ್ರಾಮಸ್ಥರು ಶಾಲೆಯ ಮುಂಭಾಗದಲ್ಲಿಯೇ ಅಂತ್ಯಕ್ರಿಯೆಗೆ ಸಿದ್ಧತೆ ಮಾಡಿಕೊಂಡು ಆಡಳಿತದ ವಿರುದ್ಧ ಇತ್ತೀಚೆಗೆ ಆಕ್ರೋಶ ವ್ಯಕ್ತಪಡಿಸಿದ್ದರು. ಆಗ ಅಧಿಕಾರಿಗಳು ಗ್ರಾಮಸ್ಥರ ಜೊತೆ ಚರ್ಚಿಸಿದ ಬಳಿಕ ಸರ್ಕಾರಿ ಜಮೀನು ರುದ್ರಭೂಮಿಗಾಗಿ ಮೀಸಲಿಟ್ಟು ಆದೇಶ ಹೊರಡಿಸಿದ್ದಾರೆ.

ಈಗಿರುವ ಜಮೀನು ಮಂಗಳಾಪುರ ಗ್ರಾಮದಿಂದ ಒಂದು ಕಿ.ಮೀ. ದೂರದಲ್ಲಿದ್ದು,

ರಸ್ತೆ ಸಂಪರ್ಕ ಇರುವುದರಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಅಳವಂಡಿ | ನಿರ್ಮಾಣವಾಗದ ಸೇತುವೆ: ಗ್ರಾಮಸ್ಥರ ಪರದಾಟ



**ಅಳವಂಡಿ :** ಹಿರೇಹಳ್ಳಕ್ಕೆ ಸೇತುವೆ ನಿರ್ಮಿಸಬೇಕು ಎಂದು ಸುತ್ತಲಿನ ಗ್ರಾಮಗಳ ಗ್ರಾಮಸ್ಥರು ಹಲವು ವರ್ಷಗಳವರೆಗೆ ಬೇಡಿಕೆ ಇಡುತ್ತ ಬಂದರೂ ಸೇತುವೆಯ ಕನಸು ಕನಸಾಗಿಯೇ ಉಳಿದಿದೆ. ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಮಾತ್ರ ಸೇತು ನಿರ್ಮಾಣಕ್ಕೆ ಕ್ರಮಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ. ಇದು ಅಳವಂಡಿ ಸಮೀಪದ ನಿಲೋಗಿಪುರ, ಹಲವಾಗಲಿ ಹಾಗೂ ಕೇಸಲಾಪುರ ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಗ್ರಾಮಗಳ ನಿವಾಸಿಗಳು, ಆಸ್ಪತ್ರೆ, ವ್ಯಾಪಾರ ವಹಿವಾಟಿಗೆ ಅಳವಂಡಿ ಗ್ರಾಮಕ್ಕೆ ತೆರಳಲು ನಿಲೋಗಿಪುರ-ಅಳವಂಡಿ ರಸ್ತೆಯನ್ನು ಅವಲಂಬಿಸಿದ್ದಾರೆ. ಆದರೆ ರಸ್ತೆ ಮಧ್ಯೆ ಇರುವ ಹಿರೇಹಳ್ಳ ಮಳೆಗಾಲದಲ್ಲಿ ಮೈದುಂಬಿ ಹರಿಯುತ್ತಿದೆ. ಹಿರೇಹಳ್ಳಕ್ಕೆ ನೆಲಮಟ್ಟದ ಸೇತುವೆಯಿದೆ. ಆದರೆ ಸೇತುವೆ ಕಲ್ಲುಗಳು ಕಿತ್ತು ಹೋಗಿವೆ. ಇದರಿಂದ ಗುಂಡಿಗಳು ನಿರ್ಮಾಣವಾಗಿದ್ದು, ನಿತ್ಯ ವಾಹನ ಸವಾರರು ಪರದಾಡುವಂತಾಗಿದೆ. ಹಿರೇಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡುವಂತೆ ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗುತ್ತಿಲ್ಲ.

ಇದರಿಂದ ಬೇಸತ್ತ ಗ್ರಾಮಸ್ಥರು ತಾವೇ ಸ್ವತಃ ಹಣ ಖರ್ಚು ಮಾಡಿ, ನೆಲಮಟ್ಟದ ಸೇತುವೆಗೆ ಮಣ್ಣು, ಕಲ್ಲು ಹಾಕಿ ತಾತ್ಕಾಲಿಕವಾಗಿ ಸಂಚರಿಸಲು ನಿರ್ಮಾಣ ಮಾಡಿದ್ದರು. ಆದರೆ ಇದೀಗ ಮತ್ತೆ ಮಳೆಯಿಂದ ಸಂಪೂರ್ಣ ನೆಲಮಟ್ಟದ ಕಲ್ಲುಗಳು ಕಿತ್ತು ಹಾಳಾಗಿದೆ. ಮಳೆಗಾಲದಲ್ಲಿ ಹಿರೇಹಳ್ಳದ ತೊಂದರೆ ಆಗುವುದರಿಂದ ಹಟ್ಟಿ ಮಾರ್ಗವಾಗಿ ಸುತ್ತು ಬಳಸಿ ಸಂಚರಿಸುವ ಸ್ಥಿತಿ ನಿರ್ಮಾಣವಾಗಿದೆ.

ಅಳವಂಡಿಗೆ ಹೋಗಬೇಕಾದರೆ ಹಿರೇಹಳ್ಳದ ಮೂಲಕ ಹಾದು ಹೋಗಿರುವ ರಸ್ತೆ ಮೂಲಕ ತೆರಳುತ್ತಾರೆ. ಸೇತುವೆ ಕಿತ್ತು ಹೋಗಿದ್ದರಿಂದ ವಾಹನ ಸವಾರರ ಬಿದ್ದು ಗಾಯಗೊಂಡಿರುವ ಹಾಗೂ ಕೆಕೆಆರ್‌ಟಿಸಿ ಬಸ್‌ವೊಂದು ಸೇತುವೆ ಮೇಲೆ ಸಿಕ್ಕಿಹಾಕಿಕೊಂಡಿರುವ ಉದಾಹರಣೆಗಳಿವೆ.

ಮಳೆಗಾಲದ ಸಂದರ್ಭದಲ್ಲಿ ಹಿರೇಹಳ್ಳ ದಾಟುವುದೇ ದೊಡ್ಡ ಸವಾಲಾಗಿದೆ. ಹಲವು ವರ್ಷಗಳಿಂದ ಹಿರೇಹಳ್ಳಕ್ಕೆ ಸೇತುವೆ ನಿರ್ಮಿಸಿಕೊಡಬೇಕು ಎಂಬ ಮನವಿಗೆ ಈವರೆಗೂ ಸ್ಪಂದನೆ ಸಿಕ್ಕಿಲ್ಲ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕರ ನಿರ್ಲಕ್ಷ್ಯ: ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಅವರಿಗೆ ಹಲವಾರು ಬಾರಿ ಹಿರೇಹಳ್ಳಕ್ಕೆ ಸೇತುವೆ ನಿರ್ಮಿಸಿಕೊಡಬೇಕು ಎಂದು ಮನವಿ ಸಲ್ಲಿಸಿದ್ದೇವೆ. ಆದರೆ ಶಾಸಕರು ಈವರೆಗೆ ಗ್ರಾಮಸ್ಥರ ಬೇಡಿಕೆಗೆ ಸ್ಪಂದಿಸಿಲ್ಲ. ಈ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಸೇತುವೆ ನಿರ್ಮಾಣಕ್ಕೆ ಕ್ರಮಕೈಗೊಳ್ಳದಿದ್ದರೆ ಗ್ರಾಮಸ್ಥರು ಸೇರಿ ಬೃಹತ್ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

# ಬಸಾಪೂರ 44.35 ಎಕರೆ ಸಾರ್ವಜನಿಕ ಕೆರೆ ತೆರವಿಗೆ ಒತ್ತಾಯ



**ಕೊಪ್ಪಳ :** ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಮತ್ತು ಪರಿಸರ ಹಿತರಕ್ಷಣಾ ವೇದಿಕೆ ಜಂಟಿ ಕ್ರಿಯಾ ವೇದಿಕೆ ಮೂಲಕ ಜಿಲ್ಲಾಧಿಕಾರಿಗಳಿಗೆ ಕೊಪ್ಪಳ ಹೋಬಳಿಯ ಬಸಾಪೂರ ಗ್ರಾಮದ ಸ.ನಂ. 143ರ 44.35 ಎಕರೆ ವಿಸ್ತೀರ್ಣದ ಸಾರ್ವಜನಿಕ ಕೆರೆಯನ್ನು ಅತಿಕ್ರಮಿಸಿ, ಕಂಪೌಂಡ್ ನಿರ್ಮಿಸಿ, ರಸ್ತೆ ಬಂದ್ ಮಾಡಿರುವ ಬಲ್ಡೋಟಾ ಕಂಪನಿ ಮೇಲೆ ಕ್ರಮ ಜರುಗಿಸಿ, ಕಂಪೌಂಡ್ ತೆರವುಗೊಳಿಸಿ, ಸಾರ್ವಜನಿಕರ ಬಳಕೆಗೆ ಕೆರೆ ಮುಕ್ತವಾಗಿಡುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು.

ಬಲ್ಡೋಟಾ ಕಂಪನಿ ಆರಂಭದಿಂದಲೂ ಆಕ್ರಮಣಕಾರಿ ನೀತಿಯನ್ನು ಅನುಸರಿಸಿ ರೈತರ ಮೇಲೆ ದೌರ್ಜನ್ಯದಿಂದ ಭೂಮಿ ವಶಪಡಿಸಿಕೊಂಡಿದೆ, ಹಿಂದಿನ ಕೆಲವು ಅದಿಕಾರಿಗಳು ಸಹ ಅದಕ್ಕೆ ಸಾಥ್ ನೀಡಿದ್ದು, ಜನರ ಪ್ರಾಣ ಮತ್ತು ಬದುಕು ಮುಖ್ಯವಾಗಿರುವ ಕಾರಣ ಬೆಲೆ ಬಾಳುವ ಹಾಗೂ ಜನ ಜಾನುವಾರುಗಳಿಗೆ ಅವಶ್ಯವಿರುವ ಕೆರೆಯನ್ನು ಸಾರ್ವಜನಿಕರಿಗೆ ಬಿಟ್ಟುಕೊಡುವಂತೆ ಉಚ್ಛನ್ಯಾಯಾಲಯದ ತೀರ್ಪು ಇದ್ದಾಗ್ಯೂ ಸಹ ತೆರವುಗೊಳಿಸದಿರುವ ಅಧಿಕಾರಿಗಳ ನಡೆ ಅನುಮಾನಕ್ಕೆ ಕಾರಣವಾಗಿದ್ದು, ಇದೇ ಜುಲೈ 23ರೊಳಗೆ ಅದನ್ನು ತೆರವುಗೊಳಿಸಬೇಕು ಇಲ್ಲವಾದಲ್ಲಿ ರೈತರೊಂದಿಗೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಬಸಾಪುರ ಸ.ನಂ. 143ರ 44.35 ಎಕರೆ ಕೆರೆ (ತಲಾಬ) ಸಾರ್ವಜನಿಕರ ಬಳಕೆಗೆ ಮುಕ್ತವಾಗಿಡಬೇಕೆಂದು, ಸಂಪರ್ಕ ರಸ್ತೆ ಬಂದ್ ಮಾಡಿ ನಿರ್ಮಿಸಿದ ಕಂಪೌಂಡ್ ತೆರವುಗೊಳಿಸಬೇಕೆಂದು, ಕೆರೆ ಏರಿಗೆ ನೇರವಾಗಿ ಮುಖ್ಯದ್ವಾರದ ಗೇಟ್ (ಆರ್ಚ್) ಅಳವಡಿಸಿ, ಕಂಪನಿಯ ಭಾರಿ ವಾಹನ ಟಿಪ್ಪರಗಳ ಓಡಾಟದಿಂದ ಮಾಡುತ್ತಿದ್ದು, ಸುಗಮವಾಗಿ ಜನ-ಜಾನುವಾರುಗಳು ಹೋಗಿ ಬರಲು ಆಗುತ್ತಿಲ್ಲ, ಆದ್ದರಿಂದ ಈ ಗೇಟ್ ತೆರವು ಮಾಡಬೇಕೆಂದು, ಕೆರೆಯ ಪೂರ್ವ ಭಾಗ ಮತ್ತು ಉತ್ತರ ಭಾಗದಲ್ಲಿ ಸುಮಾರು 10-15 ಎಕರೆ ಕೆರೆಯನ್ನು ಮುಚ್ಚಿ ರಸ್ತೆ ಮಾಡಿದ್ದನ್ನು ತೆರವುಗೊಳಿಸಬೇಕೆಂದು, ಕೆರೆ ಸರ್ವೆ ಮಾಡಿ, ಹದ್ದುಬಸ್ತ್ ಮಾಡಿ ತಾವೇ ನಿರ್ವಹಣೆ ಮಾಡಬೇಕೆಂದು, ಕಂಪನಿ ಜೊತೆ ಮಿಲಾಪಿಯಾಗಿ ಸಾರ್ವಜನಿಕರ ಹಕ್ಕನ್ನು ಧಿಕ್ಕರಿಸುವ ವರದಿ ನೀಡಿರುವ ನಿಮ್ಮ ಅಧೀನ ಅಧಿಕಾರಿಗಳ ಮೇಲೆ ಉನ್ನತಾಧಿಕಾರಿಗಳ ಮಟ್ಟದ ಅಧಿಕಾರಿಗಳಿಂದ ತನಿಖೆ ನಡೆಸಿ, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು.

ಬಸಾಪುರ, ಕಿಡದಾಳ, ಬೆಳವಿನಾಳ, ಕೊಪ್ಪಳ, ಹಾಲವರ್ತಿ, ಹೂವಿನಾಳ ಗ್ರಾಮಗಳ ಜಾನುವಾರು ನೀರು ಕುಡಿಯಲು ಸಹಕಾರಿಯಾಗುವಂತೆ ಪ್ರಸ್ತುತ ರಸ್ತೆ ಬಂದ್ ಮಾಡಿ ಹಾಕಿದ ಕಂಪೌಂಡ್ ತೆರವುಗೊಳಿಸಬೇಕೆಂದು, ಕೆರೆ ಒತ್ತುವರಿ ಮಾಡಿ ರಸ್ತೆ ನಿರ್ಮಿಸಿದ್ದನ್ನು ಗುರುತಿಸಲು ಸರ್ವೆ ಮಾಡಿ, ಹದ್ದುಬಸ್ತ್ ಮಾಡಿ, ತಾವೇ ನಿಗರಾಣಿ ಮಾಡಬೇಕೆಂದು, ಕೆರೆ ಮೇಲೆ ಓಡಾಡುವ ಟಿಪ್ಪರ್, ಬಹುಚಕ್ರಗಳ ಟ್ರಕ್ ಸಾರಿಗೆ ತಡೆಮಾಡಿ ಜನ ಜಾನುವಾರು ಸುಗಮವಾಗಿ ಹೋಗಿಬರಲು ಅನುವು ಮಾಡಬೇಕು ಎಂದು ವಿನಂತಿಸಿದ್ದಾರೆ.

ಈ ಸಂದರ್ಭದಲ್ಲಿ ಜಂಟಿ ಕ್ರಿಯಾ ವೇದಿಕೆ ಮುಖಂಡರಾದ ಕೆ. ಬಿ. ಗೋನಾಳ, ಬಸವರಾಜ ಶೀಲವಂತರ, ಮಂಜುನಾತ ಜಿ. ಗೊಂಡಬಾಳ, ಮುದುಕಪ್ಪ ಹೊಸಮನಿ, ಕೇಶವ ಕಟ್ಟಿಮನಿ, ಮಹಾಂತೇಶ ಕೊತಬಾಳ, ಮಂಜುನಾಥ ಕವಲೂರ, ಯಮನೂರಪ್ಪ ಹಾಲಳ್ಳಿ, ಪ್ರಕಾಶ ಎಂ, ಭೀಮಪ್ಪ, ಸುಂಕಪ್ಪ ಮೀಸಿ, ಶಿವಪ್ಪ ಹಡಪದ ಇತರರು ಇದ್ದರು.

# ಸಂತ್ರಸ್ತೆ ಮನೆಗೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಭೇಟಿ, ಪಾಲಕರಿಗೆ ಸಾಂತ್ವನ

**ಕೊಪ್ಪಳ** : ಬೆಂಗಳೂರಿಗೆ ದುಡಿಯಲೆಂದು ಹೋದ ಜಿಲ್ಲೆಯ ಕುಟುಂಬವೊಂದರ ಬಾಲಕಿಯ ಮೇಲೆ ಜುಲೈ 09 ರಂದು ಯಾರೋ ಅಪರಿಚಿತರು ಲೈಂಗಿಕ ಅಪರಾಧಗಳನ್ನು ಎಸಗಿ ಅವಳನ್ನು ಕೊಲೆ ಮಾಡಿದ ಬಗ್ಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ತಾವರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ರಾಮತ್ನಾಳ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಮಹಾಂತಸ್ವಾಮಿ ಪೂಜಾರ ಅವರು ಶುಕ್ರವಾರದಂದು ಬಾಲಕಿಯ ಮನೆಗೆ ಭೇಟಿ ನೀಡಿ ಪಾಲಕರಿಗೆ ಸಾಂತ್ವನ ಹೇಳಿದರು.



ಈ ಸಂದರ್ಭ ಮಾತನಾಡಿದ ಆಯೋಗದ ಸದಸ್ಯರು, ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ನಿಯಮಾವಳಿಗಳು–2020 ರನ್ವಯ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಬಲ ವ್ಯಕ್ತಿಗಳನ್ನು ನೇಮಕ ಮಾಡಲು, ಮಧ್ಯಂತರ ಪರಿಹಾರಕ್ಕೆ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸುವಂತೆ ಹಾಗೂ ಘಟಕದಿಂದ ಲಭ್ಯ ಯೋಜನೆಯಲ್ಲಿ ಕುಟುಂಬಕ್ಕೆ ಆರ್ಥಿಕ ಸಹಾಯ ಲಭ್ಯವಿದ್ದಲ್ಲಿ ನೀಡುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳರವರಿಗೆ ಸೂಚಿಸಿದರು.

ಅಲ್ಲದೇ ಸಮುದಾಯದಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆಯ ಕುರಿತು ಶಾಲೆ, ಕಾಲೇಜುಗಳ ವ್ಯಾಪ್ತಿಯಲ್ಲಿ ಮಕ್ಕಳಿಗೆ ಜಾಗೃತಿಯನ್ನು ಮೂಡಿಸುವಂತೆ ಉಪನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕೊಪ್ಪಳರವರಿಗೆ ಸೂಚಿಸಿದರು.

ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ತಿದ್ದುಪಡಿ –2019ರ ಕಲಂ 23 (4)ರಡಿಯಲ್ಲಿ ಸಂತ್ರಸ್ತ ಮಗುವಿನ ಮಾಹಿತಿಯನ್ನು ಯಾವುದೇ ಮಾಧ್ಯಮದಲ್ಲಿ ಪ್ರಕಟಿಸುವುದು, ಪ್ರಚುರ ಪಡಿಸುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಇದಕ್ಕೆ 6 ತಿಂಗಳನಿಂದ 1 ವರ್ಷದವರೆಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿರುತ್ತದೆ. ಈ ಕುರಿತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರಿನಲ್ಲಿ ಪ್ರಕರಣವನ್ನು ಸೋ–ಮೋಟೋ ಪ್ರಕರಣವನ್ನಾಗಿ ದಾಖಲಿಸಿಕೊಳ್ಳಲಾಗುವುದು ಎಂದು ಆಯೋಗದ ಸದಸ್ಯರು ತಿಳಿಸಿದರು.

ಹೊಸಬಂಡಿ ಹರ್ಲಾಪುರ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಮಕ್ಕಳ 'ಗ್ರಾಮ ಪಂಚಾಯತ್ ಮಟ್ಟದ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ'ಸಭೆಯ ಆಯೋಜನೆ ಮತ್ತು ಮಕ್ಕಳ ಗ್ರಾಮಸಭೆಗಳ ನಿಯಮಿತ ಆಯೋಜನೆ ಇಲ್ಲದಿರುವುದನ್ನು ಗಮನಿಸಿ ಕಡ್ಡಾಯವಾಗಿ ಆಯೋಜಿಸುವಂತೆ ಸೂಚಿಸಿ ಹಾಗೂ ಮಕ್ಕಳಿಗಾಗಿ ಮೀಸಲಿರುವ ಅನುದಾನಗಳ ಬಳಕೆ ಕುರಿತು ಪರಿಶೀಲಿಸಿ ಸಮರ್ಪಕ ಬಳಕೆ ಮಾಡುವಂತೆ ಸೂಚಿಸಿದರು.

ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ರಕ್ಷಣಾ ನೀತಿ ? 2016ರ ಅನುಷ್ಠಾನದ ಸಮರ್ಪಕ ನಿರ್ವಹಣೆ ಇಲ್ಲದಿರುವುದನ್ನು ಗಮನಿಸಿ ಕಡ್ಡಾಯವಾಗಿ ನಿರ್ವಹಿಸುವಂತೆ ಸೂಚಿಸಿ, ಬಿಸಿಯೂಟದ ಆಹಾರ ಪದಾರ್ಥದಗಳ ಗುಣಮಟ್ಟವನ್ನು ಪರೀಕ್ಷಿಸಿದರು. ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ ಮಕ್ಕಳ ರಕ್ಷಣಾ ನೀತಿ ? 2016ರ ಅನುಷ್ಠಾನದ ಕುರಿತು ಪರಿಶೀಲಿಸಲಾಗಿ, ಈ ಕುರಿತು ಪ್ರಾಂಶುಪಾಲರು ಮತ್ತು ಸಿಬ್ಬಂದಿಗಳಿಗೆ ಮಾಹಿತಿ ಇಲ್ಲದಿರುವುದನ್ನು ಗಮನಿಸಿ ವಿಷಾದವನ್ನು ವ್ಯಕ್ತಪಡಿಸಿ, ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ಬಾಲ್ಯವಿವಾಹ ನಿಷೇಧಾಧಿಕಾರಿಗಳಾಗಿದ್ದು, ಮಕ್ಕಳ ರಕ್ಷಣೆಯ ಜವಾಬ್ದಾರಿಯಲ್ಲಿ ಇವರೂ ಸಹ ಮುಖ್ಯ ಪಾತ್ರಧಾರಿಗಳಾಗಿದ್ದು, ಶೀಘ್ರವೇ ಎಲ್ಲ ಕಾಲೇಜುಗಳಲ್ಲಿ ಮಕ್ಕಳ ರಕ್ಷಣಾ ನೀತಿ ? 2016ರನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಿ ಆಯೋಗಕ್ಕೆ ವರದಿ ನೀಡುವಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದರು.

ಈ ಸಂದರ್ಭ ಸಮಾಜ ಕಾರ್ಯಕರ್ತ ರವಿಕುಮಾರ ಪವಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಔಟ್‌ರೀಚ್ ವರ್ಕರ್ ಪ್ರತಿಭಾ ಕಾಶಿಮಠ, ಅಂಗನವಾಡಿ ಮೇಲ್ವಿಚಾರಕರಾದ ಸುಮಂಗಲಾ ಸಜ್ಜನ, ಮುನಿರಾಬಾದ್ ಪೊಲೀಸ್‌ಠಾಣೆಯ ಮಹಿಳಾ ಪೊಲೀಸ್ ಸುಧಾ ಉಪಸ್ಥಿತರಿದ್ದರು.

# ಅಳವಂಡಿ | ಸುರಿಯುತ್ತಿರುವ ಪುನರ್ವಸು ಮಳೆ: ಸಂತಸಗೊಂಡ ರೈತಾಪಿ ವರ್ಗ



**ಅಳವಂಡಿ:** ವಲಯದ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಶುಕ್ರವಾರ ಸುರಿದ ಮಳೆಯಿಂದ ರೈತಾಪಿ ವರ್ಗದಲ್ಲಿ ಖುಷಿ ತಂದಿದೆ.

ಪ್ರಸಕ್ತವರ್ಷ ಮುಂಗಾರುಪೂರ್ವ ಮಳೆ ಪ್ರಾರಂಭದಲ್ಲಿ ಚೆನ್ನಾಗಿ ಸುರಿದಿದ್ದರಿಂದ ರೈತರು ಖುಷಿಯಿಂದ ಬಿತ್ತನೆ ಕಾರ್ಯ ನಡೆಸಿದ್ದರು.

ಬಳಿಕ ಸರಿಯಾದ ಸಮಯಕ್ಕೆ ಮಳೆಯಾಗದ್ದರಿಂದ ಮೆಕ್ಕೆಜೋಳ, ಹೆಸರು, ಸೂರ್ಯಕಾಂತಿ, ತೊಗರಿ ಮುಂತಾದ ಬೆಳೆಗಳು ಒಣಗಲು ಆರಂಭಿಸಿದ್ದವು. ಶುಕ್ರವಾರ ಬಿದ್ದ ಮಳೆ ರೈತರಲ್ಲಿ ಆಶಾಭಾವ ಮೂಡಿಸಿದೆ.

ವಲಯದ ಬಹುತೇಕ ಗ್ರಾಮಗಳಲ್ಲಿ ಪುನರ್ವಸು ಮಳೆ ಗುರುವಾರದಿಂದ ಸುರಿಯುತ್ತಿದೆ.

ಬಾಡುತ್ತಿದ್ದ ಬೆಳೆಗೆ ಜೀವಕಳೆ ಬಂದಿದೆ. ಶುಕ್ರವಾರ ಬೆಳಿಗ್ಗೆಯಿಂದ ಪ್ರಾರಂಭವಾದ ಜಡಿ ಮಳೆ ಸಂಜೆಯವರೆಗೂ ಮುಂದುವರಿದಿತ್ತು.

# ಕೊಪ್ಪಳದಲ್ಲಿ ಜೋರು ಮಳೆ; ಇಳೆ ತಂಪು



**ಕೊಪ್ಪಳ :** ಕೃಷಿ ಚಟುವಟಿಕೆ ಸಲುವಾಗಿ ಅಗತ್ಯವಾಗಿದ್ದ ಮಳೆ ಎರಡು ದಿನಗಳಿಂದ ಬೀಳುತ್ತಿದ್ದು ರೈತರಲ್ಲಿ ಮಂದಹಾಸ ಮೂಡಿದೆ. ಶುಕ್ರವಾರ ಸಂಜೆ ನಗರದಲ್ಲಿ ಬಿರುಸಿನ ಮಳೆ ಸುರಿಯಿತು.

ಸಂಜೆ ವೇಳೆ ಮಳೆ ಸುರಿದಿದ್ದರಿಂದ ನಿತ್ಯದ ಕೆಲಸ ಮುಗಿಸಿ ಮನೆಗೆ ಹೋಗುವವರು, ಮಾರುಕಟ್ಟೆಗೆ ಬಂದವರು ಮಳೆಯಲ್ಲಿ ಸಿಲುಕಬೇಕಾಯಿತು. ಜಿಲ್ಲೆಯ ಗ್ರಾಮೀಣ ಪ್ರದೇಶಗಳ ಜನ ಮಳೆಗಾಗಿ ಕಾಯುತ್ತಿದ್ದರು. ಮುಂಗಾರು ಪೂರ್ವದಲ್ಲಿ ಜಿಲ್ಲೆಯಲ್ಲಿ ವಾಡಿಕೆಗಿಂತಲೂ ಹೆಚ್ಚು ಮಳೆಯಾಗಿತ್ತು. ಮುಂಗಾರಿನ ಮೊದಲ ತಿಂಗಳಾದ ಜೂನ್‌ನಲ್ಲಿ ಮಳೆ ಕೊರತೆ ಕಾಡಿದ್ದು, ಇತ್ತೀಚೆಗಿನ ನಾಲ್ಕೈದು ದಿನಗಳಿಂದ ಮಳೆ ಬರುತ್ತಿದೆ. ಕೃಷಿ ಚಟುವಟಿಕೆಗೆ ಪೂರಕವಾಗಿದ್ದು ರೈತರಲ್ಲಿ ಖುಷಿ ಮೂಡಿದೆ.

# ವಾಲ್ಮೀಕಿ ಸಮುದಾಯ ಭವನ ದುರ್ಬಳಕೆ ಆರೋಪ

**ಯಲಬುರ್ಗಾ :** ಪಟ್ಟಣದ ಕುದ್ರಿಕೊಟಗಿ ರಸ್ತೆಯಲ್ಲಿರುವ ವಾಲ್ಮೀಕಿ ಸಮುದಾಯ ಭವನವನ್ನು, ಪಕ್ಕದಲ್ಲಿಯೇ ಕಾಲೇಜು ನಿರ್ಮಿಸುತ್ತಿರುವ ಗುತ್ತಿಗೆದಾರರು ದುರ್ಬಳಕೆ ಮಾಡಿಕೊಂಡಿದ್ದಾರೆ. ಇದರಿಂದ ಕಟ್ಟಡವು ಸಂಪೂರ್ಣ ಹಾಳಾಗಿದ್ದು, ಸಂಬಂಧಿಸಿದವರು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ವಾಲ್ಮೀಕಿ ಸಮುದಾಯದ ಮುಖಂಡರು ಆಗ್ರಹಿಸಿದ್ದಾರೆ. ಸಮುದಾಯ ಭವನಕ್ಕೆ ಭೇಟಿ ನೀಡಿದ ಸಮುದಾಯದವರು, ಕಟ್ಟಡದ ದುರವಸ್ಥೆಯನ್ನು ಕಂಡು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ವಿರುದ್ಧ ಹರಿಹಾಯ್ದರು.

ಪಂಚಾಯಿತಿವ್ಯಾಪ್ತಿಗೆಸೇರಿದಈಭವನವನ್ನು ಸರಿಯಾದ ರೀತಿ ನಿರ್ವಹಿಸುವಲ್ಲಿ ವಿಫಲರಾಗಿದ್ದರಿಂದ ಸದ್ಬಳಕೆಯಾಗದೇ ದುರ್ಬಳಕೆಯಾಗುತ್ತಿದೆ. ಸಮುದಾಯದ ಕಲ್ಯಾಣಕಾರ್ಯಕ್ರಮಗಳನ್ನುಹಮ್ಮಿಕೊಳ್ಳಲು ಇರುವ ಈ ಭವನವನ್ನು ಗುತ್ತಿಗೆದಾರರು ಸಿಮೆಂಟ್, ಖಾಲಿ ಚೀಲ ಹಾಗೂ ಇನ್ನಿತರ ಪರಿಕರಗಳನ್ನು ಇಟ್ಟುಕೊಂಡಿದ್ದು ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ತಾಲ್ಲೂಕು ಅಧ್ಯಕ್ಷ ಮಾನಪ್ಪ ಪೂಜಾರ ಮತನಾಡಿ, '?1 ಕೋಟಿ ವೆಚ್ಚದಲ್ಲಿ ಕೃಷ್ಣ ಭಾಗ್ಯ ಜಲನಿಗಮದವರಿಂದ 2016–17ರಲ್ಲಿ ನಿರ್ಮಾಣಗೊಂಡಿದ್ದ ಈ ಸಮುದಾಯ ಭವನದ ಕಿಟಕಿಗಳಿಗೆ ಅಳವಡಿಸಿದ ಗ್ಲಾಸ್‌ಗಳು ಒಡೆದಿವೆ. ಗೋಡೆಯು ಸಿಮೆಂಟ್‌ನಿಂದ ಮೆತ್ತಿಕೊಂಡು ಹಾಳಾಗಿವೆ. 20ಕ್ಕು ಹೆಚ್ಚು ಫ್ಯಾನುಗಳನ್ನು ಕಿತ್ತುಕೊಂಡು ಹೋಗಿದ್ದಾರೆ. ಟೈಲ್ಸ್‌ಗಳು ಕೂಡ ಒಡೆದಿವೆ. ಹೀಗೆ ಸಮುದಾಯದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮುನ್ನವೇ ದುರ್ಬಳಕೆಯಾಗಿ ಹಾಳಾಗುತ್ತಿರುವುದು ಸಮುದಾಯಕ್ಕೆ ಮಾಡಿದ ಅವಮಾನ' ಎಂದು ಬೇಸರ ವ್ಯಕ್ತಪಡಿಸಿದರು.

ಸಂಘದ ಕಾರ್ಯದರ್ಶಿ ಶ್ರೀಕಾಂತ ಮಾಲಿಪಾಟೀಲ ಮಾತನಾಡಿ, 'ಸಮುದಾಯದ ಸುತ್ತಲೂ ಮುಳ್ಳಿನ ಗಿಡಗಳು ಬೆಳೆದಿವೆ. ಅವುಗಳನ್ನು ಸ್ವಚ್ಛಗೊಳಿಸಿ ದುರಸ್ತಿಗೊಳಿಸಿ ಸದ್ಬಳಕೆಗೆ ಅನುಕೂಲ ಮಾಡಿಕೊಡಬೇಕು' ಎಂದು ಆಗ್ರಹಿಸಿದರು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಶ ಮಾತನಾಡಿ, 'ಭವನ ನಿರ್ಮಾಣಗೊಂಡು 10 ವರ್ಷಗಳುಗತಿಸಿವೆ. ಈವರೆಗೆ ಪಂಚಾಯಿತಿಗೆ ಹಸ್ತಾಂತರಿಸಿಲ್ಲ. ನಮ್ಮ ಸುಪರ್ದಿಗೆ ಬಂದ ಮೇಲೆ ಅದರ ನಿರ್ವಹಣೆಗೆ ಕ್ರಮವಹಿಸಲಾಗುತ್ತದೆ. ಈ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಲಾಗಿದೆ. ಆದರೂ ಹಸ್ತಾಂತರಕ್ಕೆ ಕ್ರಮಕೈಗೊಂಡಿಲ್ಲ. ಗುತ್ತಿಗೆದಾರರಿಗೆ ತಮ್ಮ ಸಾಮಗ್ರಿಗಳನ್ನು ತೆರವುಗೊಳಿಸಲು ತಿಳಿಸಲಾಗುವುದು' ಎಂದು ಹೇಳಿದರು.

ಸಂಘಟನೆ ಉಪಾಧ್ಯಕ್ಷ ಗುಂಡನಗೌಡ ಮಾಲಿಪಾಟೀಲ, ಹನಮಂತಪ್ಪ ತಳವಾರ, ಪದಾಧಿಕಾರಿಗಳಾದ ಶಂಕ್ರಪ್ಪ ಶಾಖಾಪುರ, ಹನಮಗೌಡ ಮಾಲಿಪಾಟೀಲ, ಚನ್ನಬಸವ ಗುಮಗೇರಿ, ಮೌನೇಶತಳವಾರ, ಶರಣಗೌಡ ಮಾಲಿಗೌಡ್ರ, ಲಕ್ಷ್ಮಣ ಕುಲಕರ್ಣಿ, ಶರಣಪ್ಪ ಹಿರೇಮನಿ, ಹನಮಂತ ತಲ್ಲೂರು, ಹನಮೇಶ ಕೋನಸಾಗರ, ಶರಣಪ್ಪ ಹಂಚಿ ಸೇರಿ ಅನೇಕರು ಹಾಜರಿದ್ದರು.

# 140.27 ಕೋಟಿ ಠೇವಣಿ ಸಂಗ್ರಹ: ಪಾಟೀಲ



**ಇಂಡಿ :** ಪಟ್ಟಣದ ಸಿದ್ದಸಿರಿ ಬ್ಯಾಂಕ್ 140.27 ಕೋಟಿ ಠೇವಣಿ ಸಂಗ್ರಹ ಮಾಡಿ ದಾಖಲೆ ಸೃಷ್ಟಿಸಿದೆ ಎಂದು ಸಿದ್ದಸಿರಿ ಇಂಡಿ ವಲಯ ಅಧಿಕಾರಿ ರವಿಗೌಡ ಪಾಟೀಲ ತಿಳಿಸಿದರು.

ಪಟ್ಟದಲ್ಲಿ ಶುಕ್ರವಾರ ಬ್ಯಾಂಕ್‌ನಲ್ಲಿ ಆಯೋಜಿಸಿದ್ದ 19ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯದಾದ್ಯಂತ ಸಿದ್ದಸಿರಿ ಬ್ಯಾಂಕ್ 19 ವರ್ಷಗಳಲ್ಲಿ ?4,315 ಕೋಟಿಗಳ ಠೇವಣಿ ಸಂಗ್ರಹಿಸಿದೆ. 69 ಕೋಟಿ ಶೇರು ಬಂಡವಾಳವನ್ನು ಹೊಂದಿ, ಶೇರುದಾರರಿಗೆ 2022–23ರಲ್ಲಿ ಶೇಕಡಾ 25 ಡಿವಿಡೆಂಡ್, 2023–24ರಲ್ಲಿ ಶೇ.18 ಡಿವಿಡೆಂಡ್ ನೀಡಿದ ರಾಜ್ಯದ ಏಕೈಕ ಸೌಹಾರ್ದ ಸಹಕಾರ ಸಂಘವಾಗಿದೆ. ರಾಜ್ಯದಾದ್ಯಂತ ಸಿದ್ಧಸಿರಿ ಸೌಹಾರ್ದ ಸಹಕಾರ 1,194 ಸಿಬ್ಬಂದಿ, ಚಿಂಚೊಳ್ಳಿ ಎಥನಾಲ್ ಪವರ್ ಘಟಕದಲ್ಲಿ 580 ಸಿಬ್ಬಂದಿ ಹಾಗೂ 564 ಪಿಗ್ಮಿ ಸಂಗ್ರಹಕಾರರಿಗೆ ಉದ್ಯೋಗ ಕಲ್ಪಿಸಿದೆ ಎಂದರು.

ವಿಜಯಪುರದ ಸಿದ್ಧೇಶ್ವರ ದೇವಾಲಯ ಆವರಣದಲ್ಲಿರುವ ಮುಖ್ಯ ಕಚೇರಿಯಲ್ಲಿ ದಿನದ 24 ಗಂಟೆ 365 ದಿನಗಳು ನಿರಂತರ ಸೇವೆ ನೀಡುತ್ತಿರುವ ದೇಶದ ಏಕೈಕ ಸೌಹಾರ್ದ ಸಹಕಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಎಲ್ಲ ಶಾಖೆಗಳು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಂದಿದ್ದು, ಬೀದಿ ವ್ಯಾಪಾರಸ್ಥರಿಗೆ ಕೇಸರಿ ಸ್ವಾವಲಂಬಿ ಯೋಜನೆ ಅಡಿಯಲ್ಲಿ ಬಡ್ಡಿ ರಹಿತ ಸಾಲ ನೀಡಲಾಗಿದ್ದು, ವೃದ್ಧರು, ದಿವ್ಯಾಂಗರ ಮನೆ ಬಾಗಿಲಿಗೆ ಸೇವೆ ಒದಗಿಸಿ ಗ್ರಾಹಕ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಸಿದ್ಧಸಿರಿ ಸೌಹಾರ್ದದ ಆಶ್ರಯದಲ್ಲಿ ವಿಜಯಪುರದಲ್ಲಿ ಸಿದ್ಧಸಿರಿ ಕೋಲ್ಡ್‌ಸ್ಟೋರೇಜ್–5100 ಟನ್ ಸಾಮರ್ಥ್ಯ, ಜೇವರ್ಗಿಯಲ್ಲಿ ಸಿದ್ಧಸಿರಿ ಇಂಧನ ಕೇಂದ್ರ, ಆರು ಸಿದ್ಧಸಿರಿ ಕೃಷಿ ಕೇಂದ್ರಗಳು (ವಿಜಯಪುರ, ಬಿಜ್ಜರಗಿ, ಬಬಲೇಶ್ವರ, ಸಿಂದಗಿ, ಝಳಕಿ ಹಾಗೂ ಚಿಂಚೋಳಿ), ಕಲಬುರಗಿ ಜಿಲ್ಲೆಯ ಚಿಂಚೋಳಿಯಲ್ಲಿ 423 ಕೆಎಲ್ ಪಿಡಿ ಎಥೆನಾಲ್, 30 ಮೆಗಾ ವ್ಯಾಟ್ ಪವರ ಹಾಗೂ ಉತ್ಪಾದನಾ ಘಟಕ ಮತ್ತು 5000 ಮೆಟ್ರಿಕ್ ಟನ್ ಕಬ್ಬು ನುರಿಸುವ ಸಾಮರ್ಥ್ಯವುಳ್ಳ ಘಟಕ, ವಿಜಯಪುರದಲ್ಲಿ 39 ಸಿದ್ಧಸಿರಿ ಶುದ್ಧ ಕುಡಿಯುವ ನೀರಿನ ಘಟಕ, 22 ಸಿದ್ಧಸಿರಿ ಇ– ಸ್ಟಾಂಪ್, 18 ಸಿದ್ಧಸಿರಿ ಸ್ವಂತ ಕಟ್ಟಡಗಳು, 25 ಸಿದ್ಧಸಿರಿ ಖಾಲಿ ನಿವೇಶನಗಳು ಹೊಂದಿದೆ ಎಂದರು.

# ವಿದ್ಯುತ್ ಉತ್ಪಾದನೆ 113 ಗಿಗಾವಾಟ್‌ಗೆ ಹೆಚ್ಚಿಸಲುಯೋಜನೆ: ಬಿದ್ಯಾನಂದ್ ಝಾ



**ವಿಜಯಪುರ :** ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ (ಎನ್‌ಟಿಪಿಸಿ) ತನ್ನ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 2032ರ ವೇಳೆಗೆ ಪ್ರಸ್ತುತ 82 ಗಿಗಾವಾಟ್‌ಗಳಿಂದ 113 ಗಿಗಾವಾಟ್‌ಗಳಿಗೆ ಹೆಚ್ಚಿಸಲು ಯೋಜಿಸಿದೆ' ಎಂದು ಕೂಡಗಿಯ ಎನ್‌ಟಿಪಿಸಿ ಕಾರ್ಯನಿರ್ವಾಹಕ ನಿರ್ದೇಶಕ ಬಿದ್ಯಾನಂದ್ ಝಾ ಹೇಳಿದರು.ಒಟ್ಟು ಉತ್ಪಾದನೆಯಲ್ಲಿ 60 ಗಿಗಾವಾಟ್ ಸೌರಶಕ್ತಿ ಮತ್ತು ಪವನಶಕ್ತಿಸೇರಿನವೀಕರಿಸಬಹುದಾದಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಲಾಗುವುದು' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಕೂಡಗಿ ಎನ್‌ಟಿಪಿಸಿಯಲ್ಲಿ 2,400 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಮೂಲಕ ದೇಶದ ಅತಿದೊಡ್ಡ ಏಕ ಹಂತದ ವಿದ್ಯುತ್ ಕೇಂದ್ರವಾಗಿದೆ. ಫಲಾನುಭವಿ ರಾಜ್ಯಗಳಾದ ಕರ್ನಾಟಕಕ್ಕೆ ಶೇ 50, ಆಂಧ್ರ ಪ್ರದೇಶಕ್ಕೆ ಶೇ 8.37, ತಮಿಳುನಾಡಿಗೆ ಶೇ 12.5, ತೆಲಂಗಾಣಕ್ಕೆ ಶೇ 9.75, ಕೇರಳ ಶೇ 4.37 ಮತ್ತು ಪಂಜಾಬ್‌ಗೆ ಶೇ 15ರಷ್ಟು ಸೇರಿ 12 ರಾಜ್ಯಗಳಿಗೆ ವಿದ್ಯುತ್ ಪೂರೈಸಲಾಗುತ್ತಿದೆ' ಎಂದರು.

ಕೂಡಗಿ ಸ್ಥಾವರವು ನವೀಕರಿಸಬಹುದಾದ ಶಕ್ತಿಯ ಮೂಲಕ 3.37 ಮೆಗಾವಾಟ್ ವಿದ್ಯುತ್‌ನ್ನು ಉತ್ಪಾದಿಸುತ್ತಿದೆ. ಇದರಲ್ಲಿ 2018ರಲ್ಲಿ ಕಾರ್ಯಾರಂಭ ಮಾಡಿದ ಭಾರತದ ಮೊದಲ ಹೈಬ್ರಿಡ್ ಸ್ಥಾವರದಿಂದ 2 ಮೆಗಾವಾಟ್ ಪವನ ವಿದ್ಯುತ್ ಮತ್ತು 1.37 ಮೆಗಾವಾಟ್ ಸೌರಶಕ್ತಿ ವಿದ್ಯುತ್ ಕೂಡ ಸೇರಿದೆ'

ಎಂದರು.ಪರಿಸರ ಮಾಲಿನ್ಯವಾಗದಂತೆ ಎನ್‌ಟಿಪಿಸಿ ಸ್ಥಾವರವು ಸುಧಾರಿತ ತಂತ್ರಜ್ಞಾನಗಳೊಂದಿಗೆ ಕಾರ್ಯನಿರ್ವಹಿಸುತ್ತದೆ. ಕರ್ನಾಟಕ ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ 1,580 ಎಕರೆಗಳಿಗೂ ಹೆಚ್ಚು ಪ್ರದೇಶದಲ್ಲಿ 9.5 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನಡೆಲಾಗಿದೆ' ಎಂದು ಹೇಳಿದರು.

# ಹಣ ಪಡೆದು ಕೆಲಸಕ್ಕೆ ಬರದ ಚಾಲಕನನ್ನು ಕಂಬಕ್ಕೆ ಕಟ್ಟಿ, ಜೀವ ಬೆದರಿಕೆ: ಇಬ್ಬರ ಬಂಧನ

**ವಿಜಯಪುರ:** ವಾಹನ ಚಾಲನೆ (ಡ್ರೈವಿಂಗ್) ಕೆಲಸಕ್ಕೆ ಬರುತ್ತೇನೆ ಎಂದು ಹೇಳಿ ಮುಂಗಡ ತೆಗೆದುಕೊಂಡು ಕೆಲಸಕ್ಕೂ ಬಾರದೆ, ಹಣವನ್ನು ವಾಪಸ್ ಕೊಡದ ಗೋಡಿಹಾಳದ ಚಾಲಕನನ್ನು ದಿನವಿಡೀ ಕಬ್ಬಿಣದ ಕಂಬಕ್ಕೆ ಸರಪಳಿಯಿಂದ ಕಟ್ಟಿ, ಕಾಲಿಗೆ ಕೀಲಿ ಹಾಕಿ, ಜೀವ ಬೆದರಿಕೆ ಹಾಕಿರುವ ಘಟನೆ ನಡೆದಿದೆ. ಜಿಲ್ಲೆಯ ಹತ್ತಳ್ಳಿ ಗ್ರಾಮದಲ್ಲಿ ಘಟನೆ ಶುಕ್ರವಾರ ನಡೆದಿದೆ. ಗೋಡಿಹಾಳದ ಚಾಲಕ ಭಾಷಾ ಸಾಬ್ ಅಲ್ಲಾವುದ್ದೀನ್ ಮುಲ್ಲಾ (38) ಚಾಲಕ.



ಪ್ರಕರಣದ ಆರೋಪಿಗಳಾದ ಚಡಚಣದ ಕುಮಾರ್ ಬಿರಾದಾರ ಮತ್ತು ಉಮ್ರಾಣಿಯ ಶ್ರೀಶೈಲ ಪೀರಗೊಂಡ ಎಂಬುವವರು ಸೇರಿಕೊಂಡು ಚಾಲಕನನ್ನು ಚಡಚಣದಿಂದ ಬೈಕಿನಲ್ಲಿ ಹತ್ತಿಸಿಕೊಂಡು ಬಂದು ಹತ್ತಳ್ಳಿ ಗ್ರಾಮದ ಮಲ್ಲಿಕಾರ್ಜುನ ಬಿರಾದಾರ ಎಂಬುವವರ ಅಂಗಡಿಯ ಮುಂದೆ ಕಂಬಕ್ಕೆ ಸರಪಳಿಯಿಂದ ಕಟ್ಟಿಹಾಕಿ, ಕಾಲಿಗೆ ಕಿಲಿಹಾಕಿ ಮುಂಜಾನೆಯಿಂದ ಸಂಜೆ ವರೆಗೆ ಅಕ್ರಮವಾಗಿ ಬಂಧಿಸಿ, ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿದ್ದರು.

**ಘಟನೆಯ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡಿತ್ತು.**

ಈ ಸಂಬಂಧ ಚಡಚಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಇಬ್ಬರೂ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

# ನ್ಯಾಯವಾದಿಗಳು ನ್ಯಾಯದ ರಕ್ಷಕರಾಗಿರಬೇಕು: ನ್ಯಾಯಾಧೀಶ ಹರೀಶ

**ವಿಜಯಪುರ :** ನ್ಯಾಯವಾದಿಗಳು ನ್ಯಾಯದ ರಕ್ಷಕರಾಗಿರಬೇಕು. ದೀನ– ದುರ್ಬಲರ, ಧ್ವನಿಯಿಲ್ಲದವರ ಧ್ವನಿಯಾಗಿರಬೇಕು ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹರೀಶ್ ಎ. ಹೇಳಿದ್ದಾರೆ.

ಬುಧವಾರ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಕಾನೂನು ಶಾಲೆಯಲ್ಲಿ ನಡೆದ ಮೊದಲ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.




ಕಾನೂನು ವೃತ್ತಿಯು ಬಲವಾದ ನೀತಿಶಾಸ್ತ್ರವಾಗಿದ್ದು, ನಿರಂತರ ಕಲಿಕೆ ಮತ್ತು ಆಳವಾದ ಕರ್ತವ್ಯ ಪ್ರಜ್ಞೆಯನ್ನು ಬಯಸುತ್ತದೆ. ಕಾನೂನು ವಿದ್ಯಾರ್ಥಿಗಳು ಕಾನೂನಿನ ನಿಬಂಧನೆಗಳನ್ನು ಕಲಿಯುವುದಲ್ಲದೆ, ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವ ಮೌಲ್ಯಗಳ ಪ್ರಕಾರ ಬದುಕಲು ಕಲಿಯಬೇಕು ಎಂದು ಅವರು ಹೇಳಿದರು.

ಡೀಮ್ಡ್ ವಿವಿ ಕುಲಪತಿ ಡಾ. ಅರುಣ ಚಂ. ಇನಾಮದಾರ ಮಾತನಾಡಿ, ವಿದ್ಯಾರ್ಥಿಗಳು ನಿರಂತರ ಅಧ್ಯಯನ ಮತ್ತು ಸತತ ಪ್ರಯತ್ನದಿಂದ ಯಶಸ್ಸು ಸಾಧಿಸಬೇಕು. ಪ್ರಯತ್ನಗಳು ಮಾತ್ರ ಫಲಿತಾಂಶಗಳನ್ನು ನೀಡುತ್ತವೆ. ಅಲ್ಲದೇ, ವಿದ್ಯಾರ್ಥಿಗಳು ಹೊಸ ಕಾನೂನುಗಳ ಬಗ್ಗೆ ತಿಳಿದಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂದು ಹೇಳಿದರು.

ವಿವಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ ಮಾತನಾಡಿ, ಸಮಾಜ ಬದಲಾದಂತೆ ಕಾನೂನುಗಳು ಅದಕ್ಕೆ ತಕ್ಕಂತೆ ಬದಲಾಗುತ್ತವೆ. ವಿದ್ಯಾರ್ಥಿಗಳು ಬದಲಾಗುತ್ತಿರುವ ಕಾನೂನುಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಹೇಳಿದ ಅವರು, ನಾನಾ ತತ್ವಜ್ಞಾನಿಗಳ ಸಿದ್ಧಾಂತಗಳು ಮತ್ತು ಮಾನವ ಹಕ್ಕುಗಳ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಡೀಮ್ಡ್ ವಿವಿ ಕುಲಸಚಿವ ಡಾ. ಆರ್. ವಿ. ಕುಲಕರ್ಣಿ, ಉಪಕುಲಸಚಿವ ಸತೀಶ ಪಾಟೀಲ, ಹಣಕಾಸು ಅಧಿಕಾರಿ ಬಿ. ಎಸ್. ಪಾಟೀಲ, ಬಿ.ಎಲ್.ಡಿ.ಇ ಸಂಸ್ಥೆಯ ಕಾನೂನು ಸಲಹೆಗಾರ, ಸುರೇಶ ಹಕ್ಕಿ, ಕಾನೂನು ಶಾಲೆಯ ವಿದ್ಯಾರ್ಥಿ ಸಂಘದ ಸಂಯೋಜಕ ಶೇಷಾದ್ರಿ ಕೆ., ಬೋಧಕ ಮತ್ತು ಬೋಧಕರ ಹೊರತಾದ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾನೂನು ಶಾಲೆಯ ಪ್ರಾಚಾರ್ಯ ಡಾ. ರಘುವೀರ ಜಿ. ಕುಲಕರ್ಣಿ ಸ್ವಾಗತಿಸಿದರು. ಉಪನ್ಯಾಸಕಿ ಲಾವಣ್ಯ ಪರಿಚಯಿಸಿದರು. ಪಲ್ಲವಿ ನಿರೂಪಿಸಿದರು.

# ಮಾದಕ ವಸ್ತುಗಳ ದುರುಪಯೋಗ ತಡೆಗಟ್ಟುವಿಕೆ–ಅರಿವು ಅಗತ್ಯ

**ಇಂಡಿ :** ಮಾದಕ ವಸ್ತುಗಳ ಸೇವನೆಗೆ ಒಳಗಾದರೆ, ಅದರಿಂದ ಹೊರಬರುವುದು ತುಂಬಾ ಕಷ್ಟ. ಇದು ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಈ ಪಿಡುಗಿನ ಜಾಗೃತಿಯ ಅರಿವು ಮಕ್ಕಳಲ್ಲಿ ಮೂಡಿಸಬೇಕು ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಅವರು ಶುಕ್ರವಾರದಂದು ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ಬ್ಯಾಗ್ ಲೆಸ್ ಡೇ ಅಂಗವಾಗಿ 'ಮಾದಕ ವಸ್ತುಗಳ ದುರುಪಯೋಗ ತಡೆಗಟ್ಟುವಿಕೆ' ವಿಷಯದ ಕುರಿತು ಮಾತನಾಡಿದರು.




ಕೆಡುಕಿಗೆ ಆಕರ್ಷಣೆ ಹೆಚ್ಚು. ಬೀಡಿ, ಸಿಗರೇಟು ಸೇರಿದಂತೆ ತಂಬಾಕನ್ನು ಬೇರೆ ಬೇರೆ ರೂಪಗಳಲ್ಲಿ ಸೇವಿಸುವುದು ಆರೋಗ್ಯಕ್ಕೆ ಹಾನಿಕರ. ಇದು ಜೀವನದ ಜತೆಗೆ ಆರ್ಥಿಕ ನಷ್ಟವನ್ನು ತರುತ್ತದೆ. ಮಾನವಾಭಿವೃದ್ಧಿಗೆ ದೊಡ್ಡ ಕಂಟಕವಾಗಿರುವ ಈ ಪಿಡುಗನ್ನು ಮೂಲ ಬೇರು ಸಮೇತ ಇಲ್ಲವಾಗಿಸುವುದು ಅತ್ಯಗತ್ಯ ಎಂದು ಹೇಳಿದರು.

ಮುಖ್ಯಶಿಕ್ಷಕ ಎಸ್ ಎಸ್ ಅರಬ ಮಾತನಾಡಿ, ಮಾದಕ ವಸ್ತುಗಳ ಉಪಯೋಗ ಸಾಮಾನ್ಯವಾಗಿ ಪ್ರಪಂಚಾದ್ಯಂತ ಕಂಡುಬರುವ ಒಂದು ದೊಡ್ಡ ಪಿಡುಗು. ಇದು ಗಂಡು–ಹೆಣ್ಣು,

ಬಡವ–ಶ್ರೀಮಂತ ಎನ್ನುವ ಭೇದವಿಲ್ಲದೆ ಎಲ್ಲೆಡೆಯೂ ಕಂಡುಬರುತ್ತದೆ. ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಅರಿವು ಎಲ್ಲರಲ್ಲಿ ಮೂಡಿಸಬೇಕು ಎಂದು ಹೇಳಿದರು.

ಶಿಕ್ಷಕರಾದ ಎನ್ ಬಿ ಚೌಧರಿ, ಎಸ್ ಪಿ ಪೂಜಾರಿ, ಅತಿಥಿ ಶಿಕ್ಷಕಿ ಅಲ್ಪಿಯಾ ಅಂಗಡಿ ಸೇರಿದಂತೆ ಮಕ್ಕಳು ಭಾಗವಹಿಸಿದ್ದರು.

# ಅಪ್‌ಡೇಟ್ ಆಗದ ಪುರಸಭೆ ವೆಬ್‌ಸೈಟ್




**ಮುದ್ದೇಬಿಹಾಳ :** ರಾಜ್ಯ ಸರ್ಕಾರ ಬಹುತೇಕ ಕಾಗದ ರಹಿತ ಆಡಳಿತ ವ್ಯವಸ್ಥೆಗೆ ಒತ್ತು ನೀಡಿದೆ. ಅಲ್ಲದೇ ಸಾರ್ವಜನಿಕರಿಗೆ ಅಂಗೈ ತುದಿಯಲ್ಲಿಯೇ ಮಾಹಿತಿ ನೀಡುವ ಸಲುವಾಗಿ ಎಲ್ಲ ಸೇವೆಗಳನ್ನು, ಸರ್ಕಾರಿ ಕಚೇರಿಗಳ ಮಾಹಿತಿಯನ್ನು ತಿಳಿಸಲು ವೆಬ್‌ಸೈಟ್ ರಚಿಸಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಆದರೆ ಮುದ್ದೇಬಿಹಾಳ ಪುರಸಭೆಯಲ್ಲಿ ವೆಬ್‌ಸೈಟ್ ಇದ್ದರೂ ಸರಿಯಾದ ಮಾಹಿತಿ ನೀಡಿಲ್ಲ.

ಹಿಂದಿನ ಅಧಿಕಾರಿಗಳ, ಕಾನೂನು ಸಲಹೆಗಾರರ ಫೋಟೊಗಳೇ ಇದ್ದು ಜನತೆಗೆ ತಪ್ಪು ಸಂದೇಶ ನೀಡುವಂತಿದೆ.

ಈ ಹಿಂದಿನ ಮುಖ್ಯಾಧಿಕಾರಿಯಾಗಿದ್ದ ಉಮೇಶ ಚಲವಾದಿ ಅವರು ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಅವರ ಭಾವಚಿತ್ರ ಸಮೇತ ಮಾಹಿತಿ ಬಿತ್ತರವಾಗುತ್ತಿದೆ. ಕಾನೂನು ಸಲಹೆಗಾರರ ಪೇಜ್‌ನಲ್ಲಿ ಗಮನಿಸಿದರೆ ಈ ಹಿಂದಿನ ವಕೀಲರೇ ಸೇವೆಯಲ್ಲಿದ್ದಾರೆ ಎಂಬ ಮಾಹಿತಿ ಇದೆ.

ಸದ್ಯಕ್ಕೆ ಮುಖ್ಯಾಧಿಕಾರಿಯಾಗಿ ಮಲ್ಲನಗೌಡ ಬಿರಾದಾರಸೇವೆಯಲ್ಲಿದ್ದುಕಾನೂನುಸಲಹೆಗಾರರಾಗಿ ಬಿ.ಎ.ನಾಡಗೌಡ ಸೇವೆಯಲ್ಲಿದ್ದಾರೆ. ಆದರೆ ಹಿಂದಿನ ಕಾನೂನು ಸಲಹೆಗಾರ ಎಂ.ಆರ್.ಪಾಟೀಲ ವಕೀಲರು ಪುರಸಭೆಗೆ ಕಾನೂನು ಸಲಹೆಗಾರರು ಎಂದು ಮಾಹಿತಿ ಪುರಸಭೆ ವೆಬ್‌ಸೈಟ್‌ನಿಂದ ತಿಳಿದು ಬರುತ್ತಿದೆ.

ಇನ್ನು ಕೆಲವು ಕಡೆ ಮುಖ್ಯಾಧಿಕಾರಿಗಳ ಹೆಸರು ಮಲ್ಲನಗೌಡ ಬಿರಾದಾರ ಎಂದಿದ್ದರೆ ಪುರಸಭೆಯ ಅಧಿಕಾರಿಗಳ ಪಟ್ಟಿ ತೆಗೆಯುತ್ತಿದ್ದಂತೆ ಉಮೇಶ ಚಲವಾದಿ ಮುಖ್ಯಾಧಿಕಾರಿ ಎಂದು ತೋರಿಸುತ್ತಿದೆ. ವರ್ಷಕ್ಕೂ ಮಿಗಿಲಾಗಿ ಅಧಿಕಾರ ವಹಿಸಿಕೊಂಡರೂ ಪುರಸಭೆ ವೆಬ್‌ಸೈಟ್‌ನಲ್ಲಿ ಅಧಿಕಾರಿಗಳು, ಕಾನೂನು ಸಲಹೆಗಾರರ ಮಾಹಿತಿ ಅಪಡೇಟ್ ಆಗಿಲ್ಲ. ಅಲ್ಲದೇ ಸ್ಥಾಯಿ ಸಮಿತಿ ಅಧ್ಯಕ್ಷ ಯಲ್ಲಪ್ಪ ನಾಯ್ಕಮಕ್ಕಳ ಅವರ ಭಾವಚಿತ್ರವನ್ನೂ ಅಳವಡಿಸಿಲ್ಲ.

# ಸುಧಾರಿತ ತಂತ್ರಜ್ಞಾನ ಬಳಕೆ: ಪರಿಸರ ಮಾಲಿನ್ಯ ತಡೆ

**ವಿಜಯಪುರ:** ಪರಿಸರ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಾಗ ಕೂಡಗಿ ಎನ್‌ಟಿಪಿಸಿ ಸ್ಥಾವರವು ಸುಧಾರಿತ ತಂತ್ರಜ್ಞಾನಗಳೊಂದಿಗೆ ಕಾರ್ಯನಿರ್ವಹಿಸುತ್ತದೆ ಎಂದು ಕೂಡಗಿ ಎನ್‌ಟಿಪಿಸಿ ಕಾರ್ಯನಿರ್ವಾಹಕ ನಿರ್ದೇಶಕ ಬಿದ್ಯಾನಂದ ಝಾ ಹೇಳಿದರು.

ಕೂಡಗಿಯಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಟಿಪಿಸಿಯು ಪರಿಸರ ಮಾಲಿನ್ಯ ನಿಯಂತ್ರಣ ಉದ್ದೇಶದಿಂದ ಸುಧಾರಿತ ಸೂಪರ್‌ಕ್ರಿಟಿಕಲ್ ತಂತ್ರಜ್ಞಾನದ ಮೇಲೆ ಕಾರ್ಯನಿರ್ವಹಿಸುತ್ತದೆ, ಉನ್ನತ ಮಟ್ಟದ ಸಂಸ್ಕರಣಾ ವ್ಯವಸ್ಥೆ ಮೂಲಕ ಎಲ್ಲಾ ತ್ಯಾಜ್ಯ ನೀರನ್ನು ಮರುಬಳಕೆ ಮಾಡಲಾಗುತ್ತಿದೆ ಎಂದರು.

ಡಿಜಿಟಲ್ ಬಳಕೆಗೆ ಆದ್ಯತೆ ನೀಡಿರುವುದರಿಂದ ಕಾಗದ ಬಳಕೆಯನ್ನು ಗಮನಾರ್ಹವಾಗಿ ಕಡಿಮೆ ಮಾಡಲಾಗಿದೆ. ವಾರ್ಷಿಕವಾಗಿ 3.3 ಕೋಟಿ ಕಾಗದದ ಹಾಳೆಗಳನ್ನು ಉಳಿಸಲಾಗುತ್ತಿದೆ, ಇದು 4 ಸಾವಿರ ಮರಗಳನ್ನು ಉಳಿಸುವುದಕ್ಕೆ ಸಮನಾಗಿರುತ್ತದೆ ಎಂದು ಹೇಳಿದರು.

ಕರ್ನಾಟಕ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಸುಮಾರು 1580 ಎಕರೆಗಳಲ್ಲಿ 9.5 ಲಕ್ಷಕ್ಕೂ ಹೆಚ್ಚು ಮರಗಳನ್ನು ನೆಡಲಾಗಿದೆ. ಇದರಲ್ಲಿ ಸ್ಥಾವರ ಆವರಣದ ಒಳಗೆ 350 ಎಕರೆ, ಮಮದಾಪುರ ಮೀಸಲು ಅರಣ್ಯದ 432 ಎಕರೆ ಮತ್ತು



ಕರ್ನಾಟಕ ಅರಣ್ಯ ಇಲಾಖೆ ಗುರುತಿಸಿದ ಇತರ ಸ್ಥಳಗಳಲ್ಲಿ ಮರಗಿಡಗಳನ್ನು ಬೆಳೆಸಲಾಗುತ್ತಿದೆ ಎಂದರು.

ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗುತ್ತಿದ್ದು, ವಿದ್ಯುತ್ ಸಂಗ್ರಹಣೆಗಾಗಿ ಭಾರತದ ಮೊದಲ ಸಿಒ2 ಆಧಾರಿತ ಬ್ಯಾಟರಿ ಶಕ್ತಿ ಸಂಗ್ರಹಣಾ ವ್ಯವಸ್ಥೆಯು ನಿರ್ಮಾಣ ಹಂತದಲ್ಲಿದೆ ಎಂದರು.

ಹೆಚ್ಚುವರಿಯಾಗಿ 2000 ಮೆಗಾವ್ಯಾಟ್ (ಎಂಡಬ್ಲ್ಯು ಎಚ್) ಬ್ಯಾಟರಿ ಶಕ್ತಿ ಸಂಗ್ರಹಣಾ ವ್ಯವಸ್ಥೆ (ಬಿಇಎಸ್‌ಎಸ್) ಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿದರು.

**ಸಿಎಸ್‌ಆರ್ ಕಾರ್ಯಕ್ರಮ:**

ಸಿಎಸ್‌ಆರ್ ಮೂಲಕ ಸರ್ಕಾರಿ ಶಾಲೆಗಳನ್ನು ಸ್ಮಾರ್ಟ್ ತರಗತಿ ಕೊಠಡಿಗಳು, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಪ್ರಯೋಗಾಲಯಗಳನ್ನು ಮಾಡಿಕೊಡಲಾಗಿದೆ. ಉತ್ಕರ್ಷ್' ವಿದ್ಯಾರ್ಥಿವೇತನ ಕಾರ್ಯಕ್ರಮದ ಮೂಲಕ ವಾರ್ಷಿಕವಾಗಿ 40 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ?3 ಸಾವಿರ ಮತ್ತು ನೋಟ್‌ಬುಕ್, ಬೆಂಚ್, ಕಂಪ್ಯೂಟರ್ ಮತ್ತು ಹುಡುಗಿಯರಿಗೆ ಬೈಸಿಕಲ್‌ಗಳು ಸೇರಿದಂತೆ ಅಗತ್ಯ ಕಲಿಕಾ ಸಾಧನಗಳನ್ನು ವಿತರಿಸಿದ್ದೇವೆ ಎಂದರು.

ಮಹಿಳೆಯರ ಸಬಲೀಕರಣ ಯೋಜನೆಯಡಿ 500ಕ್ಕೂ ಹೆಚ್ಚು ಮಹಿಳೆಯರಿಗೆ ಟೈಲರಿಂಗ್‌ನಲ್ಲಿ ತರಬೇತಿ ನೀಡಲಾಗಿದೆ ಮತ್ತು ಅವರ ಜೀವನೋಪಾಯಕ್ಕೆ ಬೆಂಬಲ ನೀಡಲು ಹೊಲಿಗೆ ಯಂತ್ರಗಳನ್ನು ಒದಗಿಸಲಾಗಿದೆ. ಬ್ಯೂಟಿಷಿಯನ್ ತರಬೇತಿ ಕೋರ್ಸ್‌ಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದರು.

ಸಮುದಾಯ ಭವನಗಳು, ಆಂತರಿಕ ರಸ್ತೆಗಳು ಮತ್ತು ಶಾಲೆ ಮತ್ತು ಸಮುದಾಯ ಶೌಚಾಲಯಗಳನ್ನು ನಿರ್ಮಿಸಿದ್ದೇವೆ. ತೆಲಗಿ ಮತ್ತು ಮಸೂತಿ ಶಾಲೆಗಳಲ್ಲಿ ನೀರಿನ ಶುದ್ಧೀಕರಣ ಯಂತ್ರಗಳನ್ನು ಸ್ಥಾಪಿಸಿದ್ದೇವೆ, ಸುತ್ತಮುತ್ತಲಿನ ಹಳ್ಳಿಗಳಿಗೆ ಕಸ ವಿಲೇವಾರಿ ವಾಹನಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಧಾರವಾಡ ಜಿಲ್ಲೆಯ ಸರ್ಕಾರಿ ಶಾಲೆಗಳಿಗೆ 10 ಸಾವಿರ ಬೆಂಚ್‌ಗಳನ್ನು ಒದಗಿಸಲಾಗಿದೆ ಮತ್ತು ಹೊಸ ಕೊಠಡಿಗಳ ನಿರ್ಮಾಣ ಮಾಡಲಾಗಿದೆ ಎಂದರು.

ಕೊಪ್ಪಳದ ಗವಿಮಠದ ಬಾಲಕಿಯರ ಪಿಯು ವಸತಿ ಕಾಲೇಜು ನಿರ್ಮಾಣಕ್ಕೆ ಧನ ಸಹಾಯ ನೀಡಲಾಗಿದೆ. ಹಾನಗಲ್‌ನಲ್ಲಿ ಸಿಬಿಎಸ್‌ಇ ಶಾಲೆ ನಿರ್ಮಾಣ, ವಿಜಯಪುರದ ಐಟಿಐ ಕಾಲೇಜಿಗೆ ಮೂಲಸೌಕರ್ಯ, ವಿಜಯಪುರ ಸೈನಿಕ್ ಶಾಲೆಗೆ ಸೋಲಾರ್ ಇನ್ವರ್ಟರ್ ಸ್ಥಾಪನೆ, ಬಾಲಕಿಯರ ಎನ್‌ಸಿಸಿ ಶೆಡ್ ನಿರ್ಮಾಣ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಬಸವನ ಬಾಗೇವಾಡಿ ಬಸ್ ನಿಲ್ದಾಣದಲ್ಲಿ ಹೈಟೆಕ್ ಶೌಚಾಲಯ, ಕೂಡಗಿಯಲ್ಲಿ ಪೊಲೀಸ್‌ಠಾಣೆನಿರ್ಮಾಣಮಾಡಿಕೊಡಲು ಉದ್ದೇಶಿಸಲಾಗಿದೆ ಎಂದರು.

ಎನ್‌ಟಿಪಿಸಿ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ತಿವಾರಿ, ಕಾರ್ಯಾಚರಣೆ ಮತ್ತು ಹಣಕಾಸು ವಿಭಾಗದ ವ್ಯವಸ್ಥಾಪಕ ಆಗಮ್ ಪ್ರಕಾಶ್ ತಿವಾರಿ, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಕಲಿಯಾ ಎಸ್. ಮೂರ್ತಿ, ಸಾರ್ವಜನಿಕ ಸಂಪರ್ಕ ಅಧಿಕಾರಿ ಪೂಜಾ ಪಾಂಡೆ ಇದ್ದರು.

# ರಾಷ್ಟ್ರೀಯ ಚುಚ್ಚುಮದ್ದು ಲಸಿಕಾ ಕಾರ್ಯಕ್ರಮ



**ಕೊಲ್ಹಾರ:** ತಾಲ್ಲೂಕಿನ ಕವಲಗಿಯಲ್ಲಿ ಧನುರ್ವಾಯು ಹಾಗೂ ಗಂಟಲುಮಾರಿ ರಾಷ್ಟ್ರೀಯ ಚುಚ್ಚು ಮದ್ದು ಲಸಿಕೆ ಕಾರ್ಯಕ್ರಮದಲ್ಲಿ ತೆಲಗಿ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕವಲಗಿಯ ಮಕ್ಕಳಿಗೆ ಲಸಿಕೆ ಹಾಕಲಾಯಿತು.

ಸಮುದಾಯ ಆರೋಗ್ಯ ಅಧಿಕಾರಿ ಶರಣಬಸು ಗುದ್ದಿ ಮಾತನಾಡಿ,

1 ಮತ್ತು 5ನೇ ತರಗತಿಯ ಮಕ್ಕಳಿಗೆ ಡಿಪಿಟಿ ಹಾಗೂ ಟಿಡಿ ಲಸಿಕೆ ನೀಡುವ ಮುಖಾಂತರ ಮಾರಣಾಂತಿಕ ಕಾಯಿಲೆಗಳಾದ ಧನುರ್ವಾಯು, ಗಂಟಲುಮಾರಿ ಹಾಗೂ ದಡಾರ ಕಾಯಿಲೆಗಳಿಂದ ಮಕ್ಕಳನ್ನು ರಕ್ಷಿಸಬಹುದು ಹಾಗೂ ಮಕ್ಕಳ ಪೋಷಕರು ಇದರ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಮರೆತು ತಮ್ಮ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಲಸಿಕೆ ಹಾಕಿಸಬೇಕು ಎಂದು ತಿಳಿಸಿದರು.

ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳಾದ ಶಾರದಾ ಗಿಡಜಾಡರ ಮಾತನಾಡಿ, ಲಸಿಕೆಗಳ ಬಗ್ಗೆ ಇರುವ ಭಯ ಮತ್ತು ತಪ್ಪು ಕಲ್ಪನೆಗಳ ಬಗ್ಗೆ ಮಕ್ಕಳಿಗೆ ತಿಳಿಸಿ ಅರಿವು ಮೂಡಿಸಿದರು.

ಶಾಲೆಯ ಮುಖ್ಯ ಶಿಕ್ಷಕರಾದ ಪಿ.ಎಚ್. ದೇನಕ್ಕನವರ, ಎಸ್‌ಡಿಎಂಸಿ ಅಧ್ಯಕ್ಷ ವೈ.ಎಸ್. ನಿಡಗುಂದಿ, ಸಹಶಿಕ್ಷಕ ಎ.ಬಿ. ಅರಳದಿನ್ನಿ, ಎಸ್.ಬಿ. ನಾಗಠಾಣ, ಎಂ.ಎಸ್. ದಾಸ್ಯಾಳ, ಅತಿಥಿ ಶಿಕ್ಷಕರಾದ ಮಂಜುನಾಥ, ದಳವಾಯಿ ಮತ್ತು ಅನಿಲಕುಮಾರ ತಳವಾರ ಹಾಗೂ ಆಶಾ ಕಾರ್ಯಕರ್ತರಾದ ಎಂ.ಎಂ. ಜಾರಡ್ಡಿ, ಪಿ.ಎಚ್. ಚೀರಲದಿನ್ನಿ ಇದ್ದರು.

# ಜಿಎಸ್‌ಟಿ ಸಮಸ್ಯೆ ಬಗೆಹರಿಸಲು ಆದ್ಯತೆ: ಸಚಿವ ಎಂ.ಬಿ.ಪಾಟೀಲ

**ವಿಜಯಪುರ :** ಜಗತ್ತಿನಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರ ದೊಡ್ಡದಿದೆ. ಈ ಕ್ಷೇತ್ರದ ಬೇಡಿಕೆಗಳಿಗೆ ಸ್ಪಂದಿಸಲು ಸಣ್ಣ ಕೈಗಾರಿಕೆ ಸಚಿವರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದ ಆಲಕುಂಟೆ ನಗರದ ರಾಮಚಂದ್ರ ಕಲ್ಯಾಣ ಮಂಟಪದಲ್ಲಿ ಉತ್ತರ ಕರ್ನಾಟಕ ಶಾಮಿಯಾನಾ ಸಪ್ಲೈಯರ್ಸ್, ಲೈಟಿಂಗ್, ಧ್ವನಿವರ್ಧಕ ಹಾಗೂ ಡೆಕೋರೇಶನ್ ಮಾಲೀಕರ ಕ್ಷೇಮಾಭಿವೃದ್ಧಿ ಸಂಘದಿಂದ ಶುಕ್ರವಾರ ಆಯೋಜಿಸಿದ್ದ ಶಾಮಿಯಾನ ಮಳಿಗೆಗಳ ವಸ್ತು ಪ್ರದರ್ಶನ ಮತ್ತು ವಿಜಯಪುರ 4ನೇ ಮಹಾ ಅಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

ಶಾಮಿಯಾನ ಸಂಘದವರನ್ನು ಬೆಳೆಸಲು ಮತ್ತು ಅವರಿಗೆ ಶಕ್ತಿ ತುಂಬುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಸರ್ಕಾರದ ಯೋಜನೆಗಳನ್ನು ಅವರಿಗೆ ತಲುಪಿಸಲಾಗುವುದು' ಎಂದರು.

ಶಾಮಿಯಾನ ಮಾಲೀಕರು ಮತ್ತು ಕಾರ್ಮಿಕರು ಹಗಲು ಮತ್ತು ರಾತ್ರಿ ಒತ್ತಡಗಳ ಮಧ್ಯೆ ಕೆಲಸ ಮಾಡುತ್ತಾರೆ. ಅವರು ಶ್ರಮಜೀವಿಗಳಾಗಿದ್ದು, ಶಿಸ್ತು, ಬದ್ಧತೆಯಿಂದ ಕೆಲಸ



ಮಾಡುತ್ತಿದ್ದಾರೆ.

ಇಂದಿನ ಆಧುನಿಕತೆ ತಕ್ಕಂತೆ ಮಾಲೀಕರು ಮತ್ತುಕಾರ್ಮಿಕರುವೃತ್ತಿಕೌಶವನ್ನು ಅಳವಡಿಸಿಕೊಳ್ಳಬೇಕು' ಎಂದು ಹೇಳಿದರು.

ಜಿ.ಎಸ್.ಟಿ ಸಮಸ್ಯೆ ಬಗೆಹರಿಸುವಂತೆ ಶಾಮಿಯಾನ ಸಂಘದವರು ಮಾಡಿದ ಮನವಿಗೆ ಪ್ರತಿಕ್ರಿಯೆ ನೀಡಿದ ಸಚಿವ ಎಂ.ಬಿ. ಪಾಟೀಲ ಅವರು, ಈಕುರಿತುಮುಖ್ಯಮಂತ್ರಿಗಮನಕ್ಕೆ ತಂದು ಕೇಂದ್ರ ಸರ್ಕಾರದ ಗಮನ ಸೆಳೆಯಲಾಗುವುದು' ಎಂದು ಭರವಸೆ ನೀಡಿದರು

ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ, ಗೊಳಸಾರದ ಅಭಿನವ ಪುಂಡಲಿಂಗ ಮಹಾಶಿವಯೋಗಿಗಳು, ಶ್ರದ್ಧಾನಂದ ಸ್ವಾಮೀಜಿ, ಶಾಮಿಯಾನ ಮಾಲೀಕರ ಸಂಘದಅಮರೇಶಟಿ.ಹಿರೇಮಠ, ಶಿವಾನಂದ ಆರ್. ಮಾನಕರ, ಜಿ. ಪೂರ್ಣಚಂದ್ರ ಬಾಬುರಾವ್, ಟಿ. ನರಸಿಂಗಮೂರ್ತಿ, ಮುಖಂಡರಾದ ಮಳುಗೌಡ ಪಾಟೀಲ, ಗೂಳಪ್ಪ ಶಟಗಾರ, ಮಹಾದೇವ ರಾಠೋಡ, ವಿ.ಸಿ. ನಾಗಠಾಣ, ಸಂಗು ಸಜ್ಜನ ಇದ್ದರು.


# ರಸಗೊಬ್ಬರ ಮಾರಟ ಪರವಾನಿಗೆ ಅಮಾನತು: ಹೆಚ್ಚಿನ ಬೆಲೆಗೆ ಮಾರಾಟ ಮಾರಟ ಮಾಡಿದ್ದವರ ವಿರುದ್ಧ ಕ್ರಮ

**ಕೊಟ್ಟೂರು :** ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ತೇಜವರ್ಧನ್ ರವರು ಕೊಟ್ಟೂರು ತಾಲ್ಲೂಕಿನ ವಿವಿಧ ರಸಗೊಬ್ಬರ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ ಹೆಚ್ಚಿನ ರಸಗೊಬ್ಬರ ಮಾರಾಟ ಮಾಡುತ್ತಿರುವವರಿಗೆ ನೋಟಿಸ್ ನೀಡಿದ್ದರು. ಯುರಿಯಾವನ್ನು ಹೆಚ್ಚಿನ ಬೆಲೆಗೆ ಮಾರಟಮಾಡುತ್ತಿದ್ದ ಶ್ರೀ ನಂದಿ ಟ್ರೇಡರ್ಸ್ ಹಾಗೂ ವಸುಧಾ ಸೀಡ್ಸ್ ಅಸೋಸಿಯೇಟ್ಸ್ ರವರ ಲೈಸೆನ್ಸ್ ಅಮಾನತ್ತುಗೊಳಿಸಿದರು. ಯೂರಿಯಾ ಕೊಂಡುಕೊಳ್ಳಲು ಬಂದತಂಹ ರೈತರಿಗೆ ಯೂರಿಯಾ ಜೊತೆಗೆ "ನ್ಯಾನೋ ಯುರಿಯಾವನ್ನು" ಬಳಕೆ ಮಾಡಲು ರೈತರಿಗೆ ಮನವರಿಕೆ ಮಾಡಿದರು. ಎಲ್ಲಾ ರಸಗೊಬ್ಬರ ಬೆಲೆ ಹಾಗು ದಾಸ್ತಾನನ್ನು ನೋಟಿಸ್ ಬೋರ್ಡ್ ಮೇಲೆ ಪ್ರದರ್ಶಿಸಲು ತಿಳಿಸಿದರು. ಪ್ರತಿಯೊಬ್ಬ ರೈತರಿಗೆ ಎರಡು ಚೀಲದಂತೆ ರಸಗೊಬ್ಬರ ವಿತರಿಸಲು ವಿತರಕರಿಗೆ ತಿಳಿಸಿದರು. ಯೂರಿಯಾ ಕಡಿಮೆ ಬೆಲೆಗೆ ಸಿಗುತ್ತದೆ ಎಂದು ರೈತರು ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರ ಉಪಯೋಗಿಸಬಾರದು ಎಂದು ತಿಳಿಸಿದರು. ಯೂರಿಯಾ ಶೇ 35% ಅನುಕೂಲವಾದರೆ ನ್ಯಾನೋ ಯೂರಿಯಾ ಶೇ 80 ರಷ್ಟು ಅನುಕೂಲವಾಗುವುದು. ಹೀಗಾಗಿ ರೈತರು ತಮ್ಮ ಬೆಳೆಗಳಿಗೆ ಹೆಚ್ಚಿನ ಅನುಕೂಲವಾಗುವಂತಹ ನ್ಯಾನೋ ಬಳಕೆಗೆ ಹೆಚ್ಚು ಒತ್ತು ನೀಡಬೇಕೆಂದು ರೈತರಿಗೆ ತಿಳಿಸಿದರು.

# ಯಾದೇ–25 – ಬೀಳ್ಕೊಡುವ ಸಮಾರಂಭ

## ಬಿ.ವಿ.ವಿ ಸಂಘದ ರಾಯಬಾರಿಗಳಾಗಿ ಸೇವೆ ಸಲ್ಲಿಸಿ: ಮಲ್ಲಿಕಾರ್ಜುನ ಸಾಸನೂರ





**ಬಾಗಲಕೋಟೆ :** ನಗರದ ಬಿ.ವ್ಹಿ.ವ್ಹಿ.ಎಸ್. ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಕಿರಿಯ ವಿದ್ಯಾರ್ಥಿಗಳಿಂದ ಕೊನೆಯ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಬೀಳ್ಕೊಡುವ ಸಮಾರಂಭ ಯಾದೇ – 25 ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಎಸ್. ಸಾಸನೂರ ಮಾತನಾಡುತ್ತಾಶ್ರೇಷ್ಠಪದವಿಯೊಂದಿಗೆ,ಜ್ಞಾನ, ಕೌಶಲಾವೃದ್ಧಿ,ಸ್ನೇಹಸಂಪಾದನೆಜೊತೆಗೆಹೊರ ಹೋಗುತ್ತಿರುವ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ರಾಯಭಾರಿಗಳಾಗಿ ಸಮಾಜದಲ್ಲಿ ಉತ್ತಮ ಕಾರ್ಯ ನಿರ್ವಹಿಸಿ ಕಲಿತ ಸಂಸ್ಥೆಗೆ ಗೌರವ ತಂದು ಕೊಡಬೇಕೆಂದು ಅಭಿಪ್ರಾಯ ಪಟ್ಟು ನಿಮ್ಮ ಮುಂದಿನ ಭವಿಷ್ಯ ಉತ್ತಮವಾಗಿರಲಿ ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರಾಚಾರ್ಯಡಾ.ಅರುಣವಿ.ಹೂಲಿಮಾತನಾಡಿ ಕನೀಕರ,ಬುದ್ದಿವಂತಿಕೆ ಹಾಗೂ ಸೇವಾ ಮನೋಭಾವನೆಯನ್ನು ಮೈಗೂಡಿಸಿಕೊಂಡು ಪೋಷಕರು, ಗುರು–ಹಿರಿಯರೊಂದಿಗೆ ಗೌರವದಿಂದ ನಡೆದುಕೊಂಡಾಗ ನಿಮ್ಮ ಬಾಳು ಉಜ್ವಲವಾಗುವುದೆಂದರು.

ಸಮಾರಂಭದಲ್ಲಿ ತರಗತಿಯ ಮಾರ್ಗದರ್ಶಕ ಡಾ.ಸುಧೀರ ಬೆಟಗೇರಿ ಪ್ರಾಧ್ಯಾಪಕರುಗಳಾದ ಡಾ.ರವಿ.ಕೋಟೆಣ್ಣವರ. ಡಾ.ಅಮರೇಶ ಬಳಗಾನೂರ ಸಾಂಸ್ಕೃತಿಕ ಸ0ಯೋಜ–ಕರಾದ ಡಾ.ರುದ್ರೇಶ ಕೊಪ್ಪಳ ಡಾ.ತೃಪ್ತಿ ಶಿಂದೆ. ತರಗತಿಗಳ ಮಾರ್ಗದರ್ಶಕರುಗಳಾದ ಡಾ.ನೀತಾ ಪಾಟೀಲ. ಡಾ.ಫಾತಿಮಾ ಬಾಲಸಿಂಗ.ಡಾ.ದೀಪಕ ನಾಯಿಕ. ಡಾ.ಶಶಿಕುಮಾರ ಇಜೇರಿ ಉಪಸ್ಥಿತರಿದ್ದರು. ಕಿರಿಯ – ಹಿರಿಯ ವಿದ್ಯಾರ್ಥಿಗಳು ಮಿತ್ರರು, ಶಿಕ್ಷಕರು ಹಾಗೂ ಕಾಲೇಜು ಕುರಿತು ಅಭಿಪ್ರಾಯ ಹಂಚಿಕೊಂಡರು. ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿನೆನಪಿನಕಾಣಿಕೆನೀಡಲಾಯಿತು. ವಿದ್ಯಾರ್ಥಿನಿಯರಾದ ವೈಷ್ಣವಿ ಹಾಗೂ ವೈಶಾಲಿಯರ ಮನಮೋಹಕ ಭರತನಾಟ್ಯದೊಂದಿಗೆ ಪ್ರಾರಂಭವಾದ ಸಾಂಸ್ಕೃತಿ–ಕ ಕಾರ್ಯಕ್ರಮಗಳು ಎಲ್ಲರ ಮನಸೆಳೆದವು... ವಿದ್ಯಾರ್ಥಿನಿಯರಾದ ಪುಷ್ಪಾ – ಪಾವಣಿ ಸ್ವಾಗತಿಸಿದರು.

ಶ್ರೇಯಾ ಮಲಕರ ವಂದಿಸಿದರು. ಸುಮೀತ ಸಿಂದೆ ನಿರೂಪಿಸಿದರು.

# ಬಾಗಲಕೋಟೆ ನವೀನ ಪ್ರವಾಸೋದ್ಯಮ ವಲಯದ ಕೇಂದ್ರವಾಗಿ ರೂಪಾಂತರಗೊಳ್ಳಲಿ

**ಬಾಗಲಕೋಟೆ :** ರಾಜ್ಯ ಸರ್ಕಾರ ಐಹೊಳೆ, ಪಟ್ಟದಕಲ್ಲು,ಬಾದಾಮಿ,ಕೂಡಲಸಂಗಮಮತ್ತು ಹೊಸಪೇಟೆಯ ಹಂಪಿಯಂತಹ ಐತಿಹಾಸಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ಮಾರಕಗಳನ್ನು ಒಂದೇ ಪ್ರವಾಸೋದ್ಯಮ ವಲಯವಾಗಿ ಘೋಷಿಸಲು ಮುಂದಾಗಿರುವುದು ಅಭಿನಂದನೀಯ ಹಾಗೂ ದೂರದೃಷ್ಟಿಯ ಕ್ರಮವಾಗಿದೆ. ಈ ಹಿನ್ನೆಲೆಯಲ್ಲಿ, ಈ ಎಲ್ಲಾ ತಾಣಗಳ ಭೌಗೋಳಿಕ ಮತ್ತು ಸಾರಿಗೆ ಸಂಪರ್ಕದ ದೃಷ್ಟಿಯಿಂದ ಬಾಗಲಕೋಟೆಯು ಪ್ರಾಕೃತಿಕವಾಗಿ 'ಸೆಂಟರ್ ಪಾಯಿಂಟ್' ಆಗಿದೆ ಎಂಬುದನ್ನು ಗುರುತಿಸಬೇಕು.

ಬಾಗಲಕೋಟೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಪ್ರವಾಸೋದ್ಯಮ ವಲಯದ ಕೇಂದ್ರವಾಗಿ ಅಭಿವೃದ್ಧಿಪಡಿಸಿದರೆ:

ಈ ಭಾಗದ ಹೋಟೆಲ್ ಉದ್ಯಮ, ಸಾರಿಗೆ ಸೇವೆಗಳು, ಮಾರ್ಗಸೂಚಕ ತಂತ್ರಜ್ಞಾನ (guided tours) ಮತ್ತು ಇತರೆ ಪೂರಕ ಉದ್ಯಮಗಳಿಗೆ ನವಚೈತನ್ಯ ಲಭಿಸುತ್ತದೆ.

ಇದರಿಂದ ಸ್ಥಳೀಯರಿಗೆ ಉದ್ಯೋಗ ಮತ್ತು ವ್ಯಾಪಾರದ ಹೆಚ್ಚಿನ ಅವಕಾಶಗಳು ಸಿಗುತ್ತವೆ.

ಬಾಗಲಕೋಟೆಯ ಐತಿಹಾಸಿಕ ಹಿನ್ನೆಲೆ, ನೈಸರ್ಗಿಕ ವೈಭವ ಮತ್ತು ಸೌಕರ್ಯವನ್ನು ಪ್ರವಾಸಿಗರಿಗೆ ಪರಿಚಯಿಸಬಹುದಾಗುತ್ತದೆ.

ವಿಶೇಷವಾಗಿ ಗೋವಾದಿಂದ ಹಂಪಿಗೆ ಪ್ರಯಾಣಿಸುವ ವಿದೇಶಿ ಪ್ರವಾಸಿಗರು ಅಥ–'ವಾ ಹೈದರಾಬಾದ್ ಹಾಗೂ ತೆಲಂಗಾಣದಿಂದ ಗೋವಾಕೆ ಹೋಗುವ ಪ್ರವಾಸಿಗರು, ಬಾಗಲಕೋಟೆಯ ಮೂಲಕ ಪ್ರಯಾಣಿಸುತ್ತರೆ ಇದು ಅವರಿಗೆ ಸೂಕ್ತ 'ಟೂರಿಸ್ಟ್ ಪಿಟ್ಸ್ಟಾಪ್' ಆಗಬಹುದು. ಇಲ್ಲಿನ ಹೋಟೆಲ್ಗಳು, ಮೂಲಭೂತ ಸೌಲಭ್ಯಗಳು ಮತ್ತು ಸಂಪರ್ಕ ವ್ಯವಸ್ಥೆ ಈ ಬೆಳವಣಿಗೆಗೆ ಅನುಕೂಲಕರವಾಗಿವೆ.

ಹೀಗಾಗಿ ಸರ್ಕಾರವು ಬಾಗಲಕೋಟೆಯನ್ನು ಈ ನವೀನ ಪ್ರವಾಸೋದ್ಯಮ ವಲಯದ ಕೇಂದ್ರ ಬಿಂದು (Tourist Circuit Hub) ಆಗಿ ಪರಿಗಣಿಸಬೇಕೆಂದು ನಾವು ಸಾರ್ವಜನಿಕ, ವ್ಯಾಪಾರಿ ಸಮುದಾಯ ಹಾಗೂ ಪ್ರವಾಸೋದ್ಯಮ ಕ್ಷೇತ್ರದ ವತಿಯಿಂದ ಮನವಿ ಮಾಡುತ್ತೇವೆ.

ಬಾಗಲಕೋಟೆ ಪ್ರವಾಸೋದ್ಯಮದ ನಕ್ಷೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆಯಬೇಕಾದ ಕಾಲವು ಬಂದಿದೆ! ಎಂದು ಬಾಗಲಕೋಟ್ ಯೂನಿಯನ್ ಆಫ್ ಮರ್ಚೆಂಟ್ಸ್ ಅಂಡ್ ಎಂಟಪ್ರೈನರ್ಸ್ ಅಸೋಸಿಯೇಷನ್ ಅಧ್ಯಕ್ಷ ರವಿ ಕುಮಟಗಿ, ಗೌರವ ಕಾರ್ಯದರ್ಶಿ ವಿರೂಪಾಕ್ಷ ಅಮೃತ್ಕರ್ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ರಸಗೊಬ್ಬರ ಮಾರಟ ಪರವಾನಿಗೆ ಅಮಾನತ್ತು

## ಹೆಚ್ಚಿನ ಬೆಲೆಗೆ ಮಾರಾಟ ಮಾರಟ ಮಾಡಿದ್ದವರ ವಿರುದ್ಧ ಕ್ರಮ



**ಕೊಟ್ಟೂರು :** ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ತೇಜವರ್ಧನ್ ರವರು ಕೊಟ್ಟೂರು ತಾಲ್ಲೂಕಿನ ವಿವಿಧ ರಸಗೊಬ್ಬರ ಮಾರಾಟ ಮಳಿಗೆಗಳಿಗೆ ಭೇಟಿ ನೀಡಿ ಹೆಚ್ಚಿನ ರಸಗೊಬ್ಬರ ಮಾರಾಟ ಮಾಡುತ್ತಿರುವವರಿಗೆ ನೋಟಿಸ್ ನೀಡಿದ್ದರು. ಯುರಿಯಾವನ್ನು ಹೆಚ್ಚಿನ ಬೆಲೆಗೆ ಮಾರಟಮಾಡುತ್ತಿದ್ದ ಶ್ರೀ ನಂದಿ ಟ್ರೇಡರ್ಸ್ ಹಾಗೂ ವಸುಧಾ ಸೀಡ್ಸ್ ಅಸೋಸಿಯೇಟ್ಸ್ ರವರ ಲೈಸೆನ್ಸ್ ಅಮಾನತ್ತುಗೊಳಿಸಿದರು.

ಯೂರಿಯಾ ಕೊಂಡುಕೊಳ್ಳಲು ಬಂದತಂಹ ರೈತರಿಗೆ ಯೂರಿಯಾ ಜೊತೆಗೆ "ನ್ಯಾನೋ ಯುರಿಯಾವನ್ನು" ಬಳಕೆ ಮಾಡಲು ರೈತರಿಗೆ ಮನವರಿಕೆ ಮಾಡಿದರು. ಎಲ್ಲಾರಸಗೊಬ್ಬರಬೆಲೆಹಾಗುದಾಸ್ತಾನನ್ನುನೋಟಿಸ್ ಬೋರ್ಡ್ ಮೇಲೆ ಪ್ರದರ್ಶಿಸಲು ತಿಳಿಸಿದರು.

ಪ್ರತಿಯೊಬ್ಬ ರೈತರಿಗೆ ಎರಡು ಚೀಲದಂತೆ ರಸಗೊಬ್ಬರ ವಿತರಿಸಲು ವಿತರಕರಿಗೆ ತಿಳಿಸಿದರು. ಯೂರಿಯಾ ಕಡಿಮೆ ಬೆಲೆಗೆ ಸಿಗುತ್ತದೆ ಎಂದು ರೈತರು ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರ ಉಪಯೋಗಿಸಬಾರದು ಎಂದು ತಿಳಿಸಿದರು. ಯೂರಿಯಾ ಶೇ 35% ಅನುಕೂಲವಾದರೆ ನ್ಯಾನೋ ಯೂರಿಯಾ ಶೇ 80 ರಷ್ಟು ಅನುಕೂಲವಾಗುವುದು. ಹೀಗಾಗಿ ರೈತರು ತಮ್ಮ ಬೆಳೆಗಳಿಗೆ ಹೆಚ್ಚಿನ ಅನುಕೂಲವಾಗುವಂತಹ ನ್ಯಾನೋ ಬಳಕೆಗೆ ಹೆಚ್ಚು ಒತ್ತು ನೀಡಬೇಕೆಂದು ರೈತರಿಗೆ ತಿಳಿಸಿದರು.

# ಝಾನ್ಸಿ ರಾಣಿ ಲಕ್ಷ್ಮೀಬಾಯಿ ಸಂಘದಿಂದ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಮತ್ತು ಬ್ಯಾಗ್ ವಿತರಣೆ



**ಬಳ್ಳಾರಿ :** ನಗರದ ಕರಿಮಾರೆಮ್ಮ ಕಾಲೋನಿಯಲ್ಲಿನ ಸರಕಾರಿ ಪ್ರಾಥಮಿಕ ಕಿರಿಯ ಶಾಲೆ ಹಾಗೂ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಝಾನ್ಸಿರಾಣಿಲಕ್ಷ್ಮೀಬಾಯಿಸಮಾಜಸೇವಾ ಸಂಘ ಮತ್ತು ಕರ್ನಾಟಕ ದಲಿತ ಸಂಘರ್ಷ ಸಮಿತಿ ಇವರುಗಳ ನೇತೃತ್ವದಲ್ಲಿ ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕ, ಸ್ಕೂಲ್ ಬ್ಯಾಗ್ ಮತ್ತು ಇತರೆ ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಪುಸ್ತಕಗಳನ್ನು ವಿತರಿಸಿ ಮಾತನಾಡಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಮಾಂಜಿನಿ, ಶಾಲೆಗಳಿಗೆ ಭೇಟಿ ನೀಡಿ ಮಕ್ಕಳಿಗೆ ಸ್ಕೂಲ್ ಬ್ಯಾಗ್ ಮತ್ತು ನೋಟ್ ಪುಸ್ತಕ ಅಲ್ಲದೆ ಪೆನ್ನು, ಸ್ಕೆಚ್ ಪೆನ್ಸಿಲ್ ಗಳನ್ನು ವಿತರಣೆ ಮಾಡಿ ಸಹಾಯ ಮಾಡುತ್ತಿದ್ದೇವೆ ಏಕೆಂದರೆ ಎಲ್ಲಾ ಸವಲತ್ತುಗಳನ್ನು ಓದುವ ಮಕ್ಕಳು ಕೇಳುತ್ತಾರೆ. ಅಲ್ಲದೆ ಅವರು ಓದುವ ಸಮಯದಲ್ಲಿ ಪೋಷಕರು ಅವರ ಮನೋಭಾವನೆಯನ್ನು ಗಮನಿಸಬೇಕು ಏಕೆಂದರೆ ಕೆಲವೊಂದು ಮಕ್ಕಳಿಗೆ ಒಂದು ಕಡಿಮೆಯಾದರೆ ವಿದ್ಯೆ ಕಡೆಗೆ ಗಮನ ಕೊಡೋದು ಬಹಳ ಕಡಿಮೆ ಅದಕ್ಕಾಗಿ ಪೋಷಕರು ಮಕ್ಕಳ ಓದಿನ ಬಗ್ಗೆ ಗಮನ ಕೊಡಬೇಕು, ಓದುವಂತ ಬಡ ಮಕ್ಕಳಿಗೆ ನಮ್ಮ ಸಂಘದ ವತಿಯಿಂದ ಸಣ್ಣ ಸಹಾಯ ಸಹಕಾರ ಮಾಡುತ್ತದೆ ಎಂದು ಹೇಳಿದರು.

ಜಾನ್ಸಿ ರಾಣಿ ಲಕ್ಷ್ಮೀಬಾಯಿ ಸಂಘದ ಅಧ್ಯಕ್ಷ ಭಾಗ್ಯಮ್ಮ ಮಾತನಾಡಿ, ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳು ಬಡತನದಿಂದಲೇ ಬಂದಿರುತ್ತಾರೆ ಅವರಿಗೆ ಸರಿಯಾದ ಪುಸ್ತಕ ಪೆನ್ನು ಸಹ ಇರುವುದಿಲ್ಲ ಇದರಿಂದ ಅಭ್ಯಾಸಕ್ಕೆ ತೊಂದರೆಯಾಗುತ್ತದೆ ಇದನ್ನು ಗಮನಿಸಿ ನಮ್ಮ ಸಂಘದ ವತಿಯಿಂದ ನಾವು ಆ ಮಕ್ಕಳ ಅಭ್ಯಾಸಕ್ಕೆ ಅನುಕೂಲ ವಾಗುವಂತಹ ಪುಸ್ತಕ ಪೆನ್ ಮತ್ತು ವಿವಿಧ ಸಾಮಗ್ರಿಗಳನ್ನು ನೀಡುತ್ತಿದ್ದೇವೆ ಎಂದರು.

ಈಸಂದರ್ಭಲ್ಲಿಶಾಲೆಯಎಸ್.ಡಿ.ಎಂ.ಸಿ.ಅಧ್ಯಕ್ಷರಾದ ಸಿದ್ದಮ್ಮ, ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಾದ ವಿಜಯ ಲಕ್ಷ್ಮೀ, ಕೌಲ್ ಬಜಾರ್ ಪೊಲೀಸ್. ಠಾಣೆಯ ಪಿ.ಎಸ್.ಐ ಅಧಿಕಾರಿ ಲಾರೆನ್ಸ್ ಅವರ ಧರ್ಮ ಪತ್ನಿ ಸುಗುಣ, ವಿಜಯ ಲಕ್ಷ್ಮೀ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಕೆ.ಶಶಿಕಲಾ, ಬಿ.ಶಾರದಾ, ಶೋಭಾ, ಹೊನ್ನೂರು ಬಿ ಹಾಗೂ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ನಾಸಿರ್ ಬೇಗಂ, ಝಾಹುರ್ ಬೇಗಂ, ಚೈತ್ರ ಬಿ.ಎಂ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618